ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

**BENGALURU**
**CITY UNIVERSITY**

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrar@bcu.ac.in

ಸಂ:ಬಿಸಿಯು/ಎಸ್‌ವೈಎನ್/ಸಿಂಡಿಕೇಟ್–23/180/2023–24 ದಿನಾಂಕ: 30.09.2023.

ಗೆ,
ಮಾನ್ಯ ಸಿಂಡಿಕೇಟ್ ಸದಸ್ಯರು,
ಬೆಂಗಳೂರು ನಗರ ವಿಶ್ವವಿದ್ಯಾನಿಲಯ,
ಬೆಂಗಳೂರು–560001

ಮಾನ್ಯರೆ,

ವಿಷಯ: ದಿನಾಂಕ: 27.09.2023 ರಂದು ಜರುಗಿದ ಸಿಂಡಿಕೇಟ್ 23ನೇ ಸಾಮಾನ್ಯ ಸಭೆಯ ನಡವಳಿಗಳು.

****

ದಿನಾಂಕ: 27.09.2023 ರಂದು ಪೂರ್ವಾಹ್ನ 11.30 ಗಂಟೆಗೆ ಜರುಗಿದ ಸಿಂಡಿಕೇಟ್ 23ನೇ ಸಾಮಾನ್ಯ ಸಭೆಯ ನಡವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮಾವಳಿ 5.16 ರನ್ವಯ ಕಳುಹಿಸುತ್ತಿದ್ದೇನೆ.

ನಡವಳಿಗಳನ್ನು ರವಾನಿಸಿದ ದಿನಾಂಕದಿಂದ ಏಳು ದಿನಗಳೊಳಗಾಗಿ ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ, ಮೇಲೆ ಹೇಳಿದ ಪರಿನಿಯಮಾವಳಿಗಳ ಅನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು

ಅಡಕ: ಮೇಲಿನಂತೆ

ಪ್ರತಿಗಳು:

1. ರಾಜ್ಯಪಾಲರ ವಿಶೇಷ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560 001.
2. ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), ಕರ್ನಾಟಕ ಸರ್ಕಾರ, ಬೆಂಗಳೂರು
3. ಕುಲಪತಿಗಳು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ವಿತ್ತಾಧಿಕಾರಿಗಳ ಆಪ್ತ ಕಾರ್ಯದರ್ಶಿಗಳಿಗೆ. ಬೆಂ.ನ.ವಿ.

ಬೆಂಗಳೂರು ನಗರ ವಿಶ್ವವಿದ್ಯಾನಿಲಯ BENGALURU CITY UNIVERSITY
Office of the Registrar, Central College Campus, Dr. B.R. Ambedkar Veedhi, Bengaluru – 560 001.
Ph.No.080-22131385, E-mail: registrar@bcu.ac.in

ಸಂಖ್ಯೆ:ಬಿಸಿಯು/ಎಸ್‌ವೈಎನ್–23/ಸಾಮಾನ್ಯ ಸಭೆ/180 /2023–24 ದಿನಾಂಕ: 30.09.2023.

ದಿನಾಂಕ 27.09.2023 ರಂದು ಪೂರ್ವಾಹ್ನ 11.30 ಗಂಟೆಗೆ ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು 560 001 ಇಲ್ಲಿ ಜರುಗಿದ ಸಿಂಡಿಕೇಟ್ 23ನೇ ಸಾಮಾನ್ಯ ಸಭೆಯ ನಡವಳಿಗಳು.

**ಸಭೆಯಲ್ಲಿ ಉಪಸ್ಥಿತರಿದ ಸದಸ್ಯರು:**

| | | |
|---|---|---|
| 1. | ಪ್ರೊ. ಲಿಂಗರಾಜ ಗಾಂಧಿ<br>ಕುಲಪತಿಗಳು, | ಸಭಾಧ್ಯಕ್ಷರು |
| 2. | ಡಾ. ಎಸ್. ಹರಿಪ್ರಸಾದ್ | ಸದಸ್ಯರು |
| 3. | ಶ್ರೀ ಎಂ. ವಿ. ರಂಗಪ್ಪ | ಸದಸ್ಯರು |
| 4. | ಶ್ರೀ. ಸಮರ್ಥ ಮುನಿರಾಜು | ಸದಸ್ಯರು |
| 5. | ಪ್ರೊ. ಕೆ. ಎಂ.ಮಹೇಶ್ | ಸದಸ್ಯರು |
| 6. | ಶ್ರೀ ಸತೀಶ್ ಎಂ | ಸದಸ್ಯರು |
| 7. | ಡಾ. ಎಸ್. ಎನ್. ವೆಂಕಟೇಶ್ | ಸದಸ್ಯರು |
| 8. | ಡಾ. ಸಿ. ಎಂ. ನವೀನ್‌ಕುಮಾರ್ | ಸದಸ್ಯರು |
| 9. | ಡಾ. ಪಿ. ಆರ್. ಚೇತನಾ | ಸದಸ್ಯರು |
| 10. | ಡಾ. ಆನಂದ ಕುಮಾರ್ ಸಿ. ಎಸ್<br>ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 11. | ಶ್ರೀ ಜವರೇಗೌಡ ಟಿ, ಕೆ.ಎ.ಎಸ್<br>ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |

ಕೋರಂ ಅಭಾವದಿಂದಾಗಿ ಸಭಾಧ್ಯಕ್ಷರು, ಸಭೆಯನ್ನು 10 ನಿಮಿಷಗಳ ಕಾಲ ಮುಂದೂಡಿ 11.40 ಕ್ಕೆ ಸಭೆಯನ್ನು ಪ್ರಾರಂಭಿಸಲಾಯಿತು.

ಸದಸ್ಯ ಕಾರ್ಯದರ್ಶಿಗಳಾದ ಕುಲಸಚಿವರು (ಆಡಳಿತ) ರವರು ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲ ಸದಸ್ಯರಿಗೆ ಸ್ವಾಗತವನ್ನು ಕೋರಿ, ಸಭಾಧ್ಯಕ್ಷರಾದ ಮಾನ್ಯ ಕುಲಪತಿಗಳ ಪ್ರಸ್ತಾವಿಕ ನುಡಿಗಳೊಂದಿಗೆ ಸಭೆಗೆ ಚಾಲನೆ ನೀಡಲು ವಿನಂತಿಸಿದರು.

ಮಾನ್ಯ ಕುಲಪತಿಗಳು ಎಲ್ಲ ಸದಸ್ಯರುಗಳನ್ನು ಮತ್ತೊಮ್ಮೆ ಸ್ವಾಗತಿಸಿ, ಕಳೆದ ಸಭೆಯಿಂದ ಇಲ್ಲಿಯವರೆಗೆ ವಿಶ್ವವಿದ್ಯಾಲಯದಲ್ಲಿ ಜರುಗಿದ ಪ್ರಮುಖ ಚಟುವಟಿಕೆಗಳ ಕುರಿತು ಸಭೆಗೆ ವಿವರಿಸಿದರು.

1. ಡಾ. ಆನಂದ ಕುಮಾರ ಸಿ.ಎಸ್., ಸಹ ಪ್ರಾಧಾಪಕರು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರ, ಮುದ್ದೇನಹಳ್ಳಿ, ಚಿಕ್ಕಬಳ್ಳಾಪುರ ಜಿಲ್ಲೆ, ಇವರನ್ನು ಕರ್ನಾಟಕ ಸರ್ಕಾರ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಕುಲಸಚಿವರು (ಮೌಲ್ಯಮಾಪನ)ರಾಗಿ ನೇಮಕ ಮಾಡಿದ್ದು ಅವರು ದಿನಾಂಕ 25.09.2023 ರಂದು ಅಪರಾಹ್ನ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ ಎಂದು ತಿಳಿಸಿ ಅವರಿಗೆ ಸ್ವಾಗತ ಕೋರಿದರು. ಇದುವರೆಗೆ ಕುಲಸಚಿವರು (ಮೌಲ್ಯಮಾಪನ) ರಾಗಿ ಕರ್ತವ್ಯ ನಿರ್ವಹಿಸಿದ ಡಾ. ವಿ. ಲೋಕೇಶ ರವರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಸೇವೆಯನ್ನು ಸ್ಮರಿಸಿ ದಾಖಲಿಸಲಾಗುವುದು.

2. ರಸಾಯನಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಡಾ. ಪಿ. ಆರ್. ಚೇತನಾರವರನ್ನು ಸರ್ಕಾರದ ಅನುಮೋದನೆ ಪಡೆದು ಹಿರಿಯ ಪ್ರಾಧ್ಯಾಪಕರಾಗಿ ಸಿಂಡಿಕೇಟ್ ಸಭೆಯ ಸದಸ್ಯರಾಗಿ ನಾಮನಿರ್ದೇಶನ ಮಾಡಲಾಗಿದೆ ಎಂದು ತಿಳಿಸಿ ಅವರಿಗೆ ಸ್ವಾಗತವನ್ನು ಕೋರಿದರು.

3. ದಿನಾಂಕ 10.08.2023 ರಂದು ಸ್ನಾತಕೋತ್ತರ ವಿಭಾಗಗಳ ವಿದ್ಯಾರ್ಥಿಗಳಿಗಾಗಿ ಕ್ರೀಡಾ ಕೂಟವನ್ನು ಏರ್ಪಡಿಸಲಾಗಿತ್ತು.

4. ದಿನಾಂಕ 11.08.2023 ರಂದು ವ್ಹೊಲ್ವರ್‌ಹ್ಯಾಂಪ್ಟನ್ ವಿಶ್ವವಿದ್ಯಾಲಯ, ಬೆಂಗಳೂರು ನಗರ ವಿಶ್ವವಿದ್ಯಾನಿಲಯ ಮತ್ತು ಯು.ಕೆ. ದೇಶದ ಎನ್.ಹೆಚ್.ಎಸ್ (NHS) ಒಟ್ಟುಗೂಡಿ ಭಾರತ ಸರ್ಕಾರದ ಆಯುಷ್ಮಾನ್ ಭಾರತ ಯೋಜನೆಗೆ ಸಂಬಂಧಿಸಿದಂತೆ ಡಿಜಿಟಲ್ ಸಂಪನ್ಮೂಲಗಳ ಬಳಕೆ ಕುರಿತು ಒಂದು ದಿವಸದ Webinar / Seminar ಆಯೋಜಿಸಲಾಯಿತು. ಹೆಚ್ಚಿನ ಸಂಖ್ಯೆಯ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಇದರಲ್ಲಿ ಭಾಗವಹಿಸಿದರು. ಅಗತ್ಯ ಲಿಂಕ್‌ನ್ನು ಮಹಾವಿದ್ಯಾಲಯಗಳು ಹಾಗೂ ವಿಭಾಗಗಳಿಗೆ ಒದಗಿಸಲಾಗಿತ್ತು.

5. ದಿನಾಂಕ 15.08.2023ರಂದು ಭಾರತದ 77ನೇ ಸ್ವಾತ್ರಂತ್ರೋತ್ಸವವನ್ನು ವಿಶ್ವವಿದ್ಯಾನಿಲಯದಲ್ಲಿ ಆಚರಿಸಲಾಯಿತು.

6. ದಿನಾಂಕ 16 ಮತ್ತು 17 ಆಗಸ್ಟ್ 2023 ರಂದು ವ್ಹೊಲ್ವರ್‌ಹ್ಯಾಂಪ್ಟನ್ ವಿಶ್ವವಿದ್ಯಾಲಯದ ಸಂಶೋಧಕರು ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳ ಪ್ರಾಧ್ಯಾಪಕರು ಮತ್ತು ಸಂಶೋಧನಾ ವಿದ್ಯಾರ್ಥಿಗಳೊಂದಿಗೆ, ಹೊಂದಬಹುದಾದ ಸಂಶೋಧನಾ ಅವಕಾಶಗಳ ಕುರಿತು ವಿಚಾರ ವಿನಿಮಯ ನಡೆಸಿದರು. ದಿನಾಂಕ 18 ಮತ್ತು 19 ಆಗಸ್ಟ್ 2023 ರಂದು ನಗರದ ಆಯ್ದ ಮಹಾವಿದ್ಯಾಲಯಗಳಿಗೆ ಭೇಟಿ ನೀಡಿ ಅಲ್ಲಿರುವ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳೊಂದಿಗೆ ಚರ್ಚಿಸಿದರು.

7. ದಿನಾಂಕ 18 ಮತ್ತು 19 ಆಗಸ್ಟ್ 2023 ರಂದು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗಾಗಿ ಸಾಂಸ್ಕೃತಿಕ ಚಟುವಟಿಕೆಗಳ "ಬಿ.ಸಿ.ಯು ಉತ್ಸವ"ವನ್ನು ಆಯೋಜಿಸಲಾಗಿತ್ತು.

8. ದಿನಾಂಕ 19.08.2023 ರಂದು ಅಮೇರಿಕಾ ದೇಶದ ಯುನಿವರ್ಸಿಟಿ ಆಫ್ ಅಲಬಾಮ ಪ್ರಾಧ್ಯಾಪಕರಾದ ಡಾ. ಜಿ. ಎಂ ಅನಂತರಾಮಯ್ಯ ರವರು ರಸಾಯನಶಾಸ್ತ್ರ ವಿಭಾಗಕ್ಕೆ ಭೇಟಿ ನೀಡಿ ಕೆಮಿಕಲ್ ಸೊಸೈಟಿ ಉದ್ದೇಶಿಸಿ ಉಪನ್ಯಾಸ ನೀಡಿದರು.

9. ದಿನಾಂಕ 21.08.2023 ರಂದು ಕರ್ನಾಟಕ ರಾಜ್ಯದ ಸನ್ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ವಿಧಾನಸೌಧದಲ್ಲಿ ಕರೆದ ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳ ಕುಲಪತಿಗಳ ಸಭೆಯಲ್ಲಿ ಭಾಗವಹಿಸಿ ಉನ್ನತ ಶಿಕ್ಷಣ ಕ್ಷೇತ್ರದ ವಿವಿಧ ಆಯಾಮಗಳ ಹಾಗೂ ಹೊಸದಾಗಿ ಸ್ಥಾಪನೆಯಾದ ವಿಶ್ವವಿದ್ಯಾನಿಲಯಗಳ ಕುರಿತು ವಿವರ ನೀಡಲಾಯಿತು.

10. 3ನೇ ಮತ್ತು 5ನೇ ಸೆಮಿಸ್ಟರ್ ಸ್ನಾತಕ ವ್ಯಾಸಂಗ ತರಗತಿಗಳು ದಿನಾಂಕ 30.09.2023 ರಂದು ಪ್ರಾರಂಭಿಸಲು ಎಲ್ಲಾ ಸಂಯೋಜಿತ ಕಾಲೇಜುಗಳಿಗೆ ದಿನಾಂಕ.22.08.2023 ರಂದು ಅಧಿಸೂಚನೆ ಹೊರಡಿಸಿ ತಿಳಿಸಲಾಗಿದೆ.

11. ವಿಶ್ವವಿದ್ಯಾನಿಲಯದ ವಿತ್ತಾಧಿಕಾರಿಗಳಾಗಿ ಸೇವೆ ಸಲ್ಲಿಸುತ್ತಿದ್ದ ಶ್ರೀ ರಘು ಜಿ.ಪಿ. ರವರನ್ನು ಸರ್ಕಾರ ವರ್ಗಾವಣೆ ಮಾಡಿದ್ದು ಅವರನ್ನು ದಿನಾಂಕ 22.08.2023 ರಂದು ಕರ್ತವ್ಯದಿಂದ ಬಿಡುಗಡೆ ಮಾಡಿ ವಿಶ್ವವಿದ್ಯಾನಿಲಯದ ವಾಣಿಜ್ಯ ನಿಕಾಯದ ಡೀನರಾದ ಡಾ. ಕೆ.ಆರ್. ಜಲಜಾ ಅವರನ್ನು ವಿತ್ತಾಧಿಕಾರಿಗಳ ಪ್ರಭಾರ ಕರ್ತವ್ಯವನ್ನು ವಹಿಸಲಾಗಿದೆ.

12. ದಿನಾಂಕ 05.09.2023 ರಂದು ಶಿಕ್ಷಕರ ದಿನಾಚರಣೆ ಆಚರಿಸಲಾಯಿತು.

13. ವಿವಿಧ ಸ್ನಾತಕೋತ್ತರ ಪದವಿಗಳ ಪ್ರವೇಶಾತಿಗೆ ದಿನಾಂಕ 05.09.2023 ರಂದು ಅಧಿಸೂಚನೆ ಹೊರಡಿಸಲಾಗಿದೆ.

14. ದಿನಾಂಕ 07 ಮತ್ತು 08 ಸೆಪ್ಟೆಂಬರ್ 2023 ರಂದು ಕನ್ನಡ ಅಧ್ಯಯನ ವಿಭಾಗ, **"ಕನ್ನಡ ಶಾಸನ ಸಾಹಿತ್ಯ"** ಕುರಿತು ಎರಡು ದಿವಸಗಳ ರಾಷ್ಟ್ರೀಯ ಕಾರ್ಯಾಗಾರವನ್ನು ಆಯೋಜಿಸಲಾಯಿತು.

15. ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಸಿದ್ಧಪಡಿಸಿದ V & VI ಸೆಮಿಸ್ಟರ್ ಮಾದರಿ ಪಠ್ಯಕ್ರಮಗಳ ಆಧಾರದ ಮೇಲೆ ವಿಶ್ವವಿದ್ಯಾನಿಲಯದ ವಿವಿಧ ಅಧ್ಯಯನ ಮಂಡಳಿಗಳು ರಚಿಸಿದ ಪಠ್ಯಕ್ರಮಗಳನ್ನು ದಿನಾಂಕ 22.09.2023 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆ ಅನುಮೋದಿಸಿದ್ದು, ಅವುಗಳನ್ನು ಅದೇ ದಿವಸ ಅಧಿಸೂಚನೆ ಮೂಲಕ ಪ್ರಕಟಿಸಿ ವಿಶ್ವವಿದ್ಯಾನಿಲಯದ ಜಾಲಾತಾಣದಲ್ಲಿ ಪ್ರಸ್ತುತ ಪಡಿಸಲಾಗಿದೆ.

ಮೇಲಿನ ವರದಿಯ ನಂತರ ವಿಷಯ ಸೂಚಿಯನ್ನು ಮಂಡಿಸಲು ಕುಲಸಚಿವರಿಗೆ ತಿಳಿಸಿದರು.

**ವಿಷಯ ಸಂಖ್ಯೆ: 1**

**ವಿಷಯ:** ದಿನಾಂಕ 31.07.2023 ರಂದು ಜರುಗಿದ ಸಿಂಡಿಕೇಟ್ 22ನೇ ಸಾಮಾನ್ಯ ಸಭೆಯ ದೃಢೀಕೃತ ನಡವಳಿ ಮೇಲೆ ಕೈಗೊಂಡ ಅನುಪಾಲನಾ ವರದಿ

**ಸಿಂಡಿಕೇಟ್ ತೀರ್ಮಾನ:**

**ದಿನಾಂಕ 31.07.2023 ರಂದು ಜರುಗಿದ ಸಿಂಡಿಕೇಟ್ 22ನೇ ಸಾಮಾನ್ಯ ಸಭೆಯ ದೃಢೀಕೃತ ನಡವಳಿಗಳ ಮೇಲೆ ಕೈಗೊಂಡ ಕ್ರಮದ ಅನುಪಾಲನಾ ವರದಿಗೆ ಅನುಮೋದನೆ ನೀಡಲಾಯಿತು.**

ಸದಸ್ಯರಾದ ಶ್ರೀ ಎಂ. ವಿ. ರಂಗಪ್ಪನವರು ವಿವಿಧ ಮಹಾವಿದ್ಯಾಲಯಗಳ ಸಂಯೋಜನೆ ಮುಂದುವರಿಕೆ ಅಧಿಸೂಚನೆಗಳನ್ನು ಹೊರಡಿಸುವಲ್ಲಿ ವಿಳಂಬವಾಗಿರುವುದನ್ನು ಅಧ್ಯಕ್ಷರ ಗಮನಕ್ಕೆ ತಂದರು.

ಆಡಿಟ್ ಆಕ್ಷೇಪಣೆ ಮುಂತಾದ ಕಾರಣಗಳು ಇದ್ದಲ್ಲಿ ಅವುಗಳ ಕುರಿತು ಅಂಕಪಟ್ಟಿಗಳು ತಡೆ ಹಿಡಿಯುವುದು ಒಳಗೊಂಡಂತೆ ನಂತರ ಕ್ರಮವಹಿಸಬಹುದೆಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಬಾಕಿ ಇರುವ ಮಹಾವಿದ್ಯಾಲಯಗಳ ಮುಂದುವರಿಕೆ ಸಂಯೋಜನೆಯ ಅಧಿಸೂಚನೆಗಳನ್ನು ಹೊರಡಿಸಲು ಅಗತ್ಯ ಕ್ರಮವಹಿಸಬೇಕೆಂದು ಕುಲಸಚಿವರಿಗೆ ಸೂಚಿಸಲಾಗುವದು ಎಂದು ಕುಲಪತಿಗಳು ತಿಳಿಸಿದರು.

**ವಿಷಯ ಸಂಖ್ಯೆ– 2**

**ವಿಷಯ:** 2023–24ನೇ ಶೈಕ್ಷಣಿಕ ಸಾಲಿಗೆ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೋರ್ಸುಗಳಿಗೆ ಪ್ರವೇಶಾತಿ ಶುಲ್ಕ ಹಾಗೂ ಪ್ರವೇಶಾತಿ ಅನುಮೋದನೆ ಶುಲ್ಕ ಪರಿಷ್ಕರಿಸಿ ನಿಗದಿ ಪಡಿಸುವ ಬಗ್ಗೆ:

**ಉಲ್ಲೇಖ:** ದಿನಾಂಕ: 02.08.2023 ರಂದು ಶುಲ್ಕಪಟ್ಟಿ ಪರಿಷ್ಕರಣೆ ಸಮಿತಿಯು ಸಲ್ಲಿಸಿದ ವರದಿ.

*ಪರಮಾರ್ಶಕ ಟಿಪ್ಪಣಿ:*

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ 2023–24ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಕೋರ್ಸುಗಳಿಗೆ ಸಂಬಂಧಿಸಿದಂತೆ ಪ್ರವೇಶಾತಿ ಶುಲ್ಕ ಮತ್ತು ಪ್ರವೇಶಾತಿ ಅನುಮೋದನೆ ಶುಲ್ಕಗಳ ಬಗ್ಗೆ ವಿಜ್ಞಾನ ನಿಕಾಯದ ಡೀನರಾದ ಪ್ರೊ. ಹರಿಪ್ರಸಾದ್ ಅವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ಶುಲ್ಕಪಟ್ಟಿ ಪರಿಷ್ಕರಣೆ ಸಮಿತಿಯು **ದಿನಾಂಕ: 02.08.2023ರಂದು** ಸಭೆ ಸೇರಿ ಚರ್ಚಿಸಿ ವರದಿಯನ್ನು ನೀಡಿರುತ್ತದೆ.

ಸಮಿತಿಯ ನಡವಳಿ ಹಾಗೂ ಶುಲ್ಕ ಪರಿಷ್ಕರಣಾ ಕರಡುಗಳನ್ನು ಸಿಂಡಿಕೇಟ್ ಸಭೆಯ ಅವಗಾಹನೆಗಾಗಿ ಹಾಗೂ ನಿರ್ಣಯಕ್ಕಾಗಿ ಮಂಡಿಸಲಾಗಿದೆ.

ಸಿಂಡಿಕೇಟ್ ತೀರ್ಮಾನ:

**2023–24ನೇ ಶೈಕ್ಷಣಿಕ ಸಾಲಿಗೆ ವಿವಿಧ ಕೋರ್ಸುಗಳ ಪ್ರವೇಶಾತಿ ಶುಲ್ಕ ಪರಿಷ್ಕರಣೆಗೆ ಸಂಬಂಧಿಸಿದಂತೆ ವಿಜ್ಞಾನ ನಿಕಾಯದ ಡೀನರ ಅಧ್ಯಕ್ಷತೆಯಲ್ಲಿ ರಚಿಸಿದ ಸಮಿತಿಯ ವರದಿಗೆ ಒಪ್ಪಿಗೆಯನ್ನು ನೀಡಿ, ಪರಿಷ್ಕರಿಸಲಾದ ಶುಲ್ಕಗಳಿಗೆ ಅನುಮೋದನೆ ನೀಡಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು.**

ವಿಷಯ ಸಂಖ್ಯೆ– 3

ವಿಷಯ: ಬೆಂಗಳೂರು ನಗರ ವಿಶ್ವವಿದ್ಯಾನಿಲಯಕ್ಕೆ ಹೊಸದಾಗಿ ಮಂಜೂರಾಗಿರುವ ಬೋಧಕೇತರ ಹುದ್ದೆಗಳ ಕುರಿತಂತೆ ಸಿದ್ಧಪಡಿಸಲಾದ "Statutes Governing Cadre, Recruitment & Promotion of Non-Teaching, Technical & Ministerial Staff in the Bengaluru City University" ಪರಿನಿಯಮಗಳ ಬಗ್ಗೆ.

ಉಲ್ಲೇಖ: 1. ವಿ.ವಿ. ಪತ್ರ ಸಂಖ್ಯೆ: ಬೆಂ.ನ.ವಿ/ಕುಸಆ/ಬೋ.ಕೇ/ವ್ಯನೇ/2023–24/62, ದಿನಾಂಕ: 22.05.2023.

2. ಸರ್ಕಾರದ ಪತ್ರ ಸಂಖ್ಯೆ: ಇಡಿ 555 ಯುಬಿವಿ 2022, ದಿನಾಂಕ: 25.08.2023.

***ಪರಮಾರ್ಶಕ ಟಿಪ್ಪಣಿ:***

ಬೆಂಗಳೂರು ನಗರ ವಿಶ್ವವಿದ್ಯಾನಿಲಯಕ್ಕೆ ಹೊಸದಾಗಿ ಮಂಜೂರಾಗಿರುವ ಬೋಧಕೇತರ ಹುದ್ದೆಗಳ ಕುರಿತಂತೆ ಸಿದ್ಧಪಡಿಸಲಾಗಿರುವ "Statutes Governing Cadre, Recruitment & Promotion of Non-Teaching, Technical & Ministerial Staff in the Bengaluru City University" ಕರಡು ಪರಿನಿಯಮವನ್ನು ಕುಲಾಧಿಪತಿಗಳ ಅಂಕಿತಕ್ಕಾಗಿ ಉಲ್ಲೇಖ (1) ರ ಪತ್ರದೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು.

ಸದರಿ ಪರಿನಿಯಮಗಳನ್ನು ಪರಿಶೀಲಿಸಿ ಸರ್ಕಾರ ಉಲ್ಲೇಖ (2) ರ ಪತ್ರದಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ನೀಡಿದ ಕೆಳಗೆ ನಮೂದಿಸದ ಅಭಿಪ್ರಾಯವನ್ನು ತಿಳಿಸಿ ಅಗತ್ಯ ಕ್ರಮಕೈಗೊಳ್ಳಲು ಸೂಚಿಸಿರುತ್ತಾರೆ.

***"ರಾಜ್ಯ ಸರ್ಕಾರವು ಸ್ಥಾಪಿಸಿರುವ ನಿಗಮ, ಮಂಡಳಿ, ಕಂಪನಿ, ಸ್ಥಳೀಯ ಸಂಸ್ಥೆ, ವಿಶ್ವವಿದ್ಯಾಲಯ ಇತ್ಯಾದಿ ಸ್ವಾಯತ್ತ ಸಂಸ್ಥೆಗಳು ಅವುಗಳ ನೌಕರರ ನೇಮಕಾತಿ ಮತ್ತು ಸೇವಾ ಷರತ್ತುಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ನಿಯಮ/ವಿನಿಯಮಗಳನ್ನು ರಚಿಸುವ ಬಗ್ಗೆ ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 19 ಸೇಇವಿ 2021 ದಿನಾಂಕ: 28.06.2021ರಲ್ಲಿ ನೀಡಿರುವ ಸೂಚನೆಗಳಂತೆ ಕ್ರಮವಹಿಸಲು ಆಡಳಿತ ಇಲಾಖೆಗೆ ತಿಳಿಸಿದೆ".***

ಅ. ಮೇಲಿನ ಸೂಚನೆಯಂತೆ ವಿಶ್ವವಿದ್ಯಾನಿಲಯ ಪರಿನಿಯಮಾವಳಿಗಳನ್ನು ರಚಿಸುವಾಗ ಕರ್ನಾಟಕ ಸರ್ಕಾರದ ನಿಯಮಗಳನ್ನು ಯಥಾವತ್ತಾಗಿ ಅಳವಡಿಸಿಕೊಳ್ಳದೇ ವಿಶ್ವವಿದ್ಯಾನಿಲಯದ ಆಡಳಿತದ ವಿಧಿವಿಧಾನಗಳಿಗೆ ಅನ್ವಯವಾಗುವಂತಹ ಬದಲಾವಣೆಗಳಿಗೆ ಒಳಪಟ್ಟು ಅಳವಡಿಸಿಕೊಳ್ಳಬೇಕಾಗಿದೆ.

ಆ. ಹೊರಗುತ್ತಿಗೆ (Outsourcing) ಮೇಲೆ ಸಿಬ್ಬಂದಿಗಳ ಸೇವೆ ಪಡೆಯುವುದು ಒಂದು ತಾತ್ಕಾಲಿಕವಾದ ವ್ಯವಸ್ಥೆ, ಇದನ್ನು ಸ್ಥಾಯಿ ಸ್ವರೂಪದ ವೃಂದ ಹಾಗೂ ನೇಮಕಾತಿ ಪರಿನಿಯಮಗಳಲ್ಲಿ ಸೇರಿಸುವುದು ಸರಿಯಾದ ಕ್ರಮವಲ್ಲ. ಆದಕಾರಣ ಇವುಗಳನ್ನು ನೇರ ನೇಮಕಾತಿ ಅಡಿಯಲ್ಲಿ ಸೇರಿಸಿ ಸರ್ಕಾರ ಕಾಲಕಾಲಕ್ಕೆ ನೀಡುವ ನಿರ್ದೇಶನಗಳ ಪ್ರಕಾರ ವಿವಿಧ ಹುದ್ದೆಗಳನ್ನು ಹೊರಗುತ್ತಿಗೆ ಮುಖಾಂತರ ನೇಮಕ ಮಾಡಿಕೊಳ್ಳುವ ಕುರಿತು ಕ್ರಮ ವಹಿಸಲಾಗುವುದು. ಈ ಕಾರಣದಿಂದಾಗಿ ವೃಂದ ಹಾಗೂ ನೇಮಕಾತಿ ನಿಯಮದ Schedule – IV ರಲ್ಲಿ ಹೊರಗುತ್ತಿಗೆಗಾಗಿ ನಿಗದಿಪಡಿಸಿರುವ ಹುದ್ದೆಗಳನ್ನು Schedule – I & III ರಲ್ಲಿ ನಮೂದಿಸಿ Schedule – IV ಕೈಬಿಡಲಾಗಿದೆ.

ಮೇಲ್ಕಂಡಂತೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ನೀಡಿದ ಅಭಿಪ್ರಾಯವನ್ನು ಗಮನದಲ್ಲಿಟ್ಟುಕೊಂಡು "Statutes Governing Cadre, Recruitment & Promotion of Non-Teaching, Technical& Ministerial Staff in the Bengaluru City University" ಕರಡು ಪರಿನಿಯಮಕ್ಕೆ ಸೂಕ್ತ ತಿದ್ದುಪಡಿಗಳನ್ನು ಮಾಡಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ, 2000 ಪ್ರಕರಣ 41(2) ರ ಪ್ರಕಾರ ಸಿಂಡಿಕೇಟ್ ಸಭೆಯ ಪರಿಶೀಲನೆಗಾಗಿ ಮಂಡಿಸಿದೆ.

ಪರಿನಿಯಮಗಳಿಗೆ ಮಾಡಲಾದ ತಿದ್ದುಪಡಿಗಳ ವಿವರ ಕೆಳಗಿನಂತಿವೆ.

| Page No. | Existing Text | Correction Made |
|---|---|---|
| 1. | Schedule – I to IV | Schedule – I to III |
| 3. | Sl. No. 2 (13) **"Physically Handicapped person means"** | Sl. No. 2 (13) **"Person with benchmark disability"** |
| 14 | Sl. No. 17 (1),(3) and (5)<br>The Words Mutatis Mutandis | Sl. No. 17 (1),(3) and (5)<br>The Words Mutatis Mutandis – Deleted |
| (O.P.No.: 3)<br>(N.P.No.:18) | Schedule – I Under Column – 5<br><br>**For Direct Recruitment:**<br>i. PUC or possess an equivalent qualification.<br><br>**For Promotion:**<br>i. Must have passed PUC examination and completed five years of service in the Lower Cadres.<br>ii. Computer Literacy Test prescribed by the State Government. | Under Column – 5<br>PUC or Possess an equivalent qualification.<br><br>Other text has been shifted. |
| (O.P.No.: 5)<br>(N.P.No.:22) | Schedule – III Under Column – 5<br>In the prescribed qualification mentioned under Column – 5 after the words M.Sc "Computer Science" is added. | |
| (O.P.No.:6-8)<br>(N.P.No.:18-20) | All the cadres mentioned in Schedule – IV have been shifted to Schedule - I and III | |

<u>ಸಿಂಡಿಕೇಟ್ ತೀರ್ಮಾನ:</u>

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಬೋಧಕೇತರ ಹುದ್ದೆಗಳ ಕುರಿತಂತೆ ರಚಿಸಲಾಗಿರುವ **"Statutes Governing Cadre, Recruitment & Promotion of Non-Teaching, Technical & Ministerial Staff in the Bengaluru City University"** ಗಳನ್ನು ಪರಿಶೀಲಿಸಿ ಅನುಮೋದನೆ ನೀಡಲಾಯಿತು.

ವಿಷಯ ಸಂಖ್ಯೆ-4:

ವಿಷಯ: ವಿವಿಧ ಮಹಾವಿದ್ಯಾಲಯಗಳ ಸಂಶೋಧನಾ ಕೇಂದ್ರಗಳು ಪಾವತಿಸುವ ಶುಲ್ಕ ಪರಿಷ್ಕರಣೆ ಹಾಗೂ ಹೊಸದಾಗಿ ಮಾನ್ಯತೆ ಮತ್ತು ನವೀಕರಣಕ್ಕಾಗಿ ಅರ್ಜಿಗಳನ್ನು ಆಹ್ವಾನಿಸುವ ಕುರಿತು.

***ಪರಾಮರ್ಶಕ ಟಿಪ್ಪಣಿ:***

ವಿಶ್ವವಿದ್ಯಾನಿಲಯದ ಅಡಿಯಲ್ಲಿ ಸ್ನಾತಕೋತ್ತರ ವ್ಯಾಸಂಗ ನೀಡುತ್ತಿರುವ ವಿವಿಧ ಮಹಾವಿದ್ಯಾಲಯಗಳ ಸಂಶೋಧನಾ ಕೇಂದ್ರಗಳಿಗೆ ವಿಶ್ವವಿದ್ಯಾನಿಲಯ ಪ್ರಾರಂಭದ 2018-19 ನೇ ಸಾಲಿನಲ್ಲಿ ಕೆಳಕಂಡ ಶುಲ್ಕವನ್ನು ನಿಗಧಿಪಡಿಸಲಾಗಿತ್ತು. ಆ ನಂತರ ಶುಲ್ಕ ಪರಿಷ್ಕರಣೆ ಆಗಿರುವುದಿಲ್ಲ. ಕೋವಿಡ್ -19ರ ಹಿನ್ನಲೆಯಲ್ಲಿ 2 ವರ್ಷ ಶುಲ್ಕ ಹೆಚ್ಚು ಮಾಡಿರುವುದಿಲ್ಲ. ಕಾರಣ ನಂತರ 2 ವರ್ಷಗಳಿಗೆ ಪ್ರತಿ ವರ್ಷಕ್ಕೆ 10% ರಂತೆ 20 ಪ್ರತಿಶತ ಶುಲ್ಕ ಹೆಚ್ಚಿಸಿ ಹತ್ತಿರದ ಕಾರ್ಯಸಾಧ್ಯವಾದ ಮೊತ್ತಕ್ಕೆ ನಿಗಧಿಪಡಿಸಲು ಪ್ರಸ್ತಾಪಿಸಲಾಗಿದೆ.

| ಕ್ರಮ ಸಂಖ್ಯೆ | ಶುಲ್ಕಗಳ ವಿವರ | ಪ್ರಸ್ತುತ ಶುಲ್ಕ | ಪರಿಷ್ಕರಿಸಬೇಕಾದ ಶುಲ್ಕ |
|---|---|---|---|
| 1. | ಹೊಸ ಸಂಶೋಧನಾ ಕೇಂದ್ರಗಳ ಪ್ರಾರಂಭಿಸಲು | 83,600/- | 1,00,000/- |
| 2. | 4 ವರ್ಷಗಳ ನವೀಕರಣ ಶುಲ್ಕ | 35,000/- | 40,000/- |
| 3. | ವಾರ್ಷಿಕ ಶುಲ್ಕ | 12,100/- | 15,000/- |

ವಿಭಾಗವಾರು ಸಂಶೋಧನಾ ಕೇಂದ್ರಗಳಿಗೆ ಮಾನ್ಯತೆ ನೀಡುವುದರಿಂದ ಮಹಾವಿದ್ಯಾಲಯದ ಪ್ರತಿಯೊಂದು ವಿಭಾಗವನ್ನು ಪ್ರತ್ಯೇಕ ಸಂಶೋಧನಾ ಕೇಂದ್ರಗಳಾಗಿ ಪರಿಗಣಿಸಲಾಗುವುದು.

2024-25ನೇ ಸಾಲಿನಿಂದ ಹೊಸದಾಗಿ ಪ್ರಾರಂಭಿಸಲು ಆಸಕ್ತಿ ಹೊಂದಿದ ಸ್ನಾತಕೋತ್ತರ ವ್ಯಾಸಂಗಗಳನ್ನು ಹೊಂದಿದ ಮಹಾವಿದ್ಯಾಲಯಗಳಿಂದ ಮತ್ತು 4 ವರ್ಷಗಳನ್ನು ಪೂರೈಸಿರುವ ಅಸ್ತಿತ್ವದಲ್ಲಿರುವ ಸಂಶೋಧನಾ ಕೇಂದ್ರಗಳ ಮಾನ್ಯತೆಯನ್ನು ನವೀಕರಿಸಲು ಅರ್ಜಿಗಳನ್ನು ಆಹ್ವಾನಿಸಬೇಕಾಗಿದೆ.

ಮೇಲ್ಕಂಡ ಪ್ರಸ್ತಾವನೆಗನುಗುಣವಾಗಿ ಸಂಶೋಧನಾ ಕೇಂದ್ರಗಳ ಮಾನ್ಯತೆ ನವೀಕರಣ ಕುರಿತು ಶುಲ್ಕ ಪರಿಷ್ಕರಣೆಗೆ ಹಾಗೂ 2024-25ನೇ ಸಾಲಿನಿಂದ ಹೊಸದಾಗಿ ಸಂಶೋಧನಾ ಕೇಂದ್ರಗಳನ್ನು ಪ್ರಾರಂಭಿಸಲು ಹಾಗೂ ಹಾಲಿ ಸಂಶೋಧನಾ ಕೇಂದ್ರಗಳ ನವೀಕರಣ ಕುರಿತು ಅರ್ಜಿಗಳನ್ನು ಆಹ್ವಾನಿಸಲು ಅನುಮೋದನೆ ಕೋರಿ ಸಿಂಡಿಕೇಟ್ ಸಭೆಯ ಪರಿಶೀಲನೆಗೆ ಮಂಡಿಸಲಾಗಿದೆ.

ಸಿಂಡಿಕೇಟ್ ತೀರ್ಮಾನ:

ವಿವಿಧ ಮಹಾವಿದ್ಯಾಲಯಗಳ ಸಂಶೋಧನಾ ಕೇಂದ್ರಗಳು ಪಾವತಿಸಬೇಕಾದ ಶುಲ್ಕವನ್ನು ಕೆಳಗಿನಂತೆ ಪರಿಷ್ಕರಿಸಲು ಸಿಂಡಿಕೇಟ್ ಸಭೆ ಅನುಮೋದನೆ ನೀಡಿತು.

| ಕ್ರಮ ಸಂಖ್ಯೆ | ಶುಲ್ಕಗಳ ವಿವರ | ಪ್ರಸ್ತುತ ಶುಲ್ಕ | ಪರಿಷ್ಕರಿಸಬೇಕಾದ ಶುಲ್ಕ |
|---|---|---|---|
| 1. | ಹೊಸ ಸಂಶೋಧನಾ ಕೇಂದ್ರಗಳ ಪ್ರಾರಂಭಿಸಲು | 83,600/- | 1,00,000/- |
| 2. | 4 ವರ್ಷಗಳ ನವೀಕರಣ ಶುಲ್ಕ | 35,000/- | 40,000/- |
| 3. | ವಾರ್ಷಿಕ ಶುಲ್ಕ | 12,100/- | 15,000/- |

ಹೊಸ ಸಂಶೋಧನಾ ಕೇಂದ್ರಗಳಿಗೆ ಮತ್ತು ಮಾನ್ಯತೆ ನವೀಕರಣಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಲು ಸಭೆ ಅನುಮೋದನೆ ನೀಡಿತು.

ವಿಷಯ ಸಂಖ್ಯೆ-5:

ವಿಷಯ: ವಾಣಿಜ್ಯ ವಿಭಾಗದ ಪ್ರಾಧ್ಯಾಪಕರಾದ ಡಾ॥ ಎಂ. ಮುನಿನಾರಾಯಣಪ್ಪ ಅವರ ವಿರುದ್ಧ ಜರುಗಿದ ಆಂತರಿಕ ದೂರು ಸಮಿತಿಯು (ICC) ಸಲ್ಲಿಸಿರುವ ವಿಚಾರಣೆ ವರದಿಯ–ಪರಿಶೀಲನೆ ಕುರಿತು.

ಉಲ್ಲೇಖ:
1. ದಿನಾಂಕ: 17.12.2021 ರಂದು ನಡೆದ ಸಿಂಡಿಕೇಟ್ ಸಭೆಯ ನಿರ್ಣಯ.
2. ವಿ.ವಿ. ಸಂಖ್ಯೆ:ಬೆಂ.ನ.ವಿ./ಕುಸಆ/ಆ.ದೂ.ಸ/349/2021-22, ದಿನಾಂಕ: 29.01.2022.
3. ಆಂತರಿಕದೂರು ಸಮಿತಿಯ (ICC) ವರದಿ ದಿನಾಂಕ: 21.08.2023.

*ಪರಾಮರ್ಶಕ ಟಿಪ್ಪಣಿ*

ವಾಣಿಜ್ಯ ವಿಭಾಗದ ಪ್ರಾಧ್ಯಾಪಕರಾದ ಡಾ॥ ಎಂ. ಮುನಿನಾರಾಯಣಪ್ಪಅವರ ಮಾರ್ಗದರ್ಶನದಲ್ಲಿ ಸಂಶೋಧನಾ ವಿದ್ಯಾರ್ಥಿಯಾಗಿದ್ದ ಶ್ರೀಮತಿ ದೀಕ್ಷಾರವರು ಸಂಶೋಧನಾ ಮಾರ್ಗದರ್ಶಕರು ತಮ್ಮೊಂದಿಗೆ ಅನುಚಿತವಾಗಿ ವರ್ತಿಸಿರುವ ಕುರಿತಂತೆ ದಿನಾಂಕ: 15.11.2021 ಮತ್ತು 18.11.2021 ರಂದು ಸಲ್ಲಿಸಿರುವ ಅರ್ಜಿಯಲ್ಲಿ ಮಾಡಿರುವ ಆರೋಪಗಳ ಬಗ್ಗೆ ವಿಚಾರಣೆ ನಡೆಸಿ ವರದಿ ಸಲ್ಲಿಸಲು ಆಂತರಿಕ ದೂರು ಸಮಿತಿಯ (ICC) ಅಧ್ಯಕ್ಷರಾದ ಡಾ. ಪಿ.ಆರ್.ಚೇತನ, ಪ್ರಾಧ್ಯಾಪಕರು, ರಸಾಯನಶಾಸ್ತ್ರ ವಿಭಾಗ ಅವರಿಗೆ ತಿಳಿಸಲಾಗಿತ್ತು. ಅದರಂತೆ, ICC ಸಮಿತಿಯು ಕೂಲಂಕುಷವಾಗಿ ವಿಚಾರಣೆ ನಡೆಸಿ, ಸಮಿತಿಯ ಅಧ್ಯಕ್ಷರು ದಿನಾಂಕ: 21.08.2023 ರಂದು ವಿಶ್ವವಿದ್ಯಾನಿಲಯಕ್ಕೆ ಮುಚ್ಚಿದ ಲಕೋಟೆಯಲ್ಲಿ ವರದಿಯನ್ನು ಸಲ್ಲಿಸಿರುತ್ತಾರೆ.

ಸಂಶೋಧನಾ ವಿದ್ಯಾರ್ಥಿನಿ ಶ್ರೀಮತಿ ದೀಕ್ಷಾರವರು ದಿನಾಂಕ: 15.11.2021 ಮತ್ತು 18.11.2021 ರಲ್ಲಿ ಸಲ್ಲಿಸಿರುವ ಆರೋಪಗಳನ್ನು The Sexual Harassment of Women at Workplace (Prevention, Prohibition and Redressal) Act, 2013 ರ ಮತ್ತು UGC (Prevention, Prohibition and Redressal of Sexual Harassment of Women Employees and Students in Higher

Educational Institutions) Regulations, 2015 ನಿಯಮಾನುಸಾರ ICC ಸಮಿತಿಯು ವಿಧಿವತ್ತಾಗಿ ವಿಚಾರಣೆ ನಡೆಸಿ, ಮುಚ್ಚಿದ ಲಕೋಟೆಯಲ್ಲಿ ವರದಿಯನ್ನು ಸಲ್ಲಿಸಿರುತ್ತದೆ.ಶಿಸ್ತು ಪ್ರಾಧಿಕಾರವಾದ ಸಿಂಡಿಕೇಟ್ ಸಭೆಯ ಪರಿಗಣನೆ ಮತ್ತು ಸೂಕ್ತ ತೀರ್ಮಾನಕ್ಕಾಗಿ ಮಂಡಿಸಿದೆ.

***ವಿವರಣೆ:***

ಸಮಿತಿ ರಚನೆ ಕುರಿತು ಮಾನ್ಯ ಕುಲಪತಿಗಳು ಸಭೆಗೆ ವಿವರಗಳನ್ನು ಒದಗಿಸಿದರು. ವಿಚಾರಣಾ ಸಮಿತಿಯ ಅಧ್ಯಕ್ಷರು ಸಲ್ಲಿಸಿದ ಮುಚ್ಚಿದ ಲಕೋಟೆಯನ್ನು ಸಭೆಯಲ್ಲಿ ತೆರೆಯಲಾಯಿತು. ಐಸಿಸಿ ಸಮಿತಿಯ ಅಧ್ಯಕ್ಷರಾಗಿರುವ ಡಾ. ಚೇತನಾ ರವರು ತಮ್ಮ ಅಧ್ಯಕ್ಷತೆಯಲ್ಲಿ ಸಲ್ಲಿಸಿದ ವರದಿಯ ಚರ್ಚೆಯ ಸಂದರ್ಭದಲ್ಲಿ ತಾವು ಸಭೆಯಲ್ಲಿ ಉಪಸ್ಥಿತರಿರುವುದು ಸಮಂಜಸವಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿ, ಅಧ್ಯಕ್ಷರ ಅನುಮತಿ ಪಡೆದು ಸಭೆಯಿಂದ ಹೊರಗೆ ಹೋದರು. ವರದಿಯಲ್ಲಿರುವ ಅಂಶಗಳ ಕುರಿತು ಪರಿಶೀಲಿಸುವ ಪೂರ್ವದಲ್ಲಿ ವರದಿಯ ಮುದ್ರಿತ ಪ್ರತಿಗಳನ್ನು ಸದಸ್ಯರಿಗೆ ನೀಡಬೇಕೆಂದು ಸದಸ್ಯರು ಅಭಿಪ್ರಾಯ ವ್ಯಕ್ತಪಡಿಸಿದರು. ಕುಲಪತಿಗಳು ಈ ಕುರಿತು ವಿವರಣೆ ನೀಡಿ, ವರದಿಯನ್ನು ವಿವರವಾಗಿ ಪರಿಗಣಿಸುವ ಮೊದಲು, ಈ ಹಿಂದೆ ಸಿಂಡಿಕೇಟ್ ಸಭೆ ಸದರಿ ಪ್ರಾಧ್ಯಾಪಕರ ವಿರುದ್ಧ ನಡತೆ ನಿಯಮಗಳ ಉಲ್ಲಂಘನೆಗಾಗಿ ಸಿ.ಸಿ.ಎ ನಿಯಮಗಳ ಅಡಿಯಲ್ಲಿ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳ ವರದಿಯ ಆಧಾರದ ಮೇಲೆ ಒಂದು ವಾರ್ಷಿಕ ವೇತನ ಬಡ್ತಿಯನ್ನು ಸಂಚಿತ ರಹಿತವಾಗಿ ತಡೆ ಹಿಡಿಯುವ ಶಿಕ್ಷೆ ನೀಡಲಾಗಿದೆ. ಈಗ ಲೈಂಗಿಕ ಕಿರುಕುಳಕ್ಕೆ ಸಂಬಂಧಿಸಿದಂತೆ –The Sexual Harassment of Women at Workplace (Prevention, Prohibition and Redressal) Act, 2013 ರ ಮತ್ತು UGC (Prevention, Prohibition and Redressal of Sexual Harassment of Women Employees and Students in Higher Educational Institutions) Regulations, 2015 ನಿಯಮಾನುಸಾರ ಐ.ಸಿ.ಸಿ ವಿಚಾರಣೆ ನಡೆಸಿ, ವರದಿ ಸಲ್ಲಿಸಿದ್ದು, ಅದನ್ನು ಸಭೆಯ ಪರಿಶೀಲನೆಗೆ ಮಂಡಿಸಲಾಗಿದೆ. ವಿಷಯ ಅತ್ಯಂತ ಸೂಕ್ಷ್ಮವಾಗಿದ್ದು, ವರದಿಯ ಮತ್ತು ದೂರುದಾರರ ಗೌಪ್ಯತೆ ಕಾಪಾಡಿಕೊಳ್ಳುವುದು ನಮ್ಮ ಹೊಣೆಯಾಗಿದೆ ಮತ್ತು ಈ ಕುರಿತು ಕಾನೂನು ಅಭಿಪ್ರಾಯ ಪಡೆಯುವುದು ಸೂಕ್ತ ಎಂದು ಹೇಳಿದರು. ಸದಸ್ಯರಾದ ಶ್ರೀ. ಸಮರ್ಥ ಮುನಿರಾಜು, ಶ್ರೀ ಎಂ. ವಿ. ರಂಗಪ್ಪ, ಪ್ರೊ. ಕೆ. ಎಂ. ಮಹೇಶ, ಪ್ರೊ. ಎಸ್. ಹರಿಪ್ರಸಾದರವರು ಚರ್ಚೆಯಲ್ಲಿ ಭಾಗವಹಿಸಿ ಈ ವರದಿಯ ಮೇಲೆ ಅಂತಿಮ ತೀರ್ಮಾನ ಕೈಗೊಳ್ಳುವ ಪೂರ್ವದಲ್ಲಿ ಕಾನೂನು ಅಭಿಪ್ರಾಯ ಪಡೆದು ಕಾನೂನು ಅಭಿಪ್ರಾಯದೊಂದಿಗೆ ಮುಂದಿನ ಸಭೆಯಲ್ಲಿ ಮಂಡಿಸಬಹುದೆಂದು ತಿಳಿಸಿದರು.

ಶ್ರೀ. ಸಮರ್ಥ ಮುನಿರಾಜು ರವರು ವರದಿಯನ್ನು ಅಂತಿಮವಾಗಿ ಪ್ರಕಟಿಸುವ ಪೂರ್ವದಲ್ಲಿ ದೂರು ನೀಡಿದ ವ್ಯಕ್ತಿಯ ಹೆಸರನ್ನು ಕಾಣದಂತೆ ಮರೆ ಮಾಡಬೇಕೆಂದು ಹೇಳಿದರು.

**ಸಿಂಡಿಕೇಟ್ ತೀರ್ಮಾನ:**

**ವರದಿಯ ಗೌಪ್ಯತೆಯನ್ನು ಕಾಪಾಡಿಕೊಳ್ಳಲು ತಿಳಿಸಿ ಉಪಸ್ಥಿತರಿದ್ದ ಎಲ್ಲ ಸದಸ್ಯರಿಗೆ ವರದಿಯ ಪ್ರತಿಯನ್ನು ನೀಡಿ, ವಿಚಾರಣಾ ವರದಿಯ ಮೇಲೆ ಕಾನೂನು ತಜ್ಞರ ಅಭಿಪ್ರಾಯ ಪಡೆದು ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಬೇಕೆಂದು ಸೂಚಿಸಿ ವಿಷಯವನ್ನು ಮುಂದೂಡಲಾಯಿತು.**

ವಿಷಯ ಸಂಖ್ಯೆ: 6

ವಿಷಯ: ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅರ್ಹ ಬೋಧಕ ಸಿಬ್ಬಂದಿಗಳಿಗೆ ಪದೋನ್ನತಿ ನೀಡಲು ರಚಿಸಬೇಕಾದ Screening / Selection Committee ಗಳಿಗೆ ವಿಷಯ ತಜ್ಞರನ್ನು ನಾಮನಿರ್ದೇಶನ ಮಾಡಲು ಪ್ರಾಧ್ಯಾಪಕರ ಪಟ್ಟಿಗಳಿಗೆ ಅನುಮೋದನೆ ನೀಡುವ ಕುರಿತು.

***ಪರಾಮರ್ಶಕ ಟಿಪ್ಪಣಿ:***

ದಿನಾಂಕ 31.07.2023 ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಅರ್ಹ ಬೋಧಕ ಶಿಕ್ಷಕರಿಗೆ ಸಿ.ಎ.ಎಸ್. ಅಡಿಯಲ್ಲಿ ಪದೋನ್ನತಿ ನೀಡುವ ಕುರಿತು ಕೆಳಗಿನ ತೀರ್ಮಾನ ಕೈಗೊಳ್ಳಲಾಗಿದೆ.

> **"ಅಂತಿಮ ತಿದ್ದುಪಡಿಯೊಂದಿಗೆ ಸರ್ಕಾರಕ್ಕೆ ಸಲ್ಲಿಸಿರುವ ಪರಿನಿಯಮಾವಳಿಗಳು ಶೀಘ್ರದಲ್ಲಿ ಅನುಮೊದನೆಗೊಂಡು ಬಾರದಿದ್ದಲ್ಲಿ, ಬೆಂಗಳೂರು ವಿಶ್ವವಿದ್ಯಾಲಯದ ಸಿ.ಎ.ಎಸ್. ಪರಿನಿಯಮಗಳನ್ನು ಅಳವಡಿಸಿಕೊಂಡು ಸದರಿ ಪರಿನಿಯಮಗಳ ಪ್ರಕಾರ ನೇಮಕಾತಿ ಮಂಡಳಿಗಳನ್ನು ರಚಿಸಿ, ಸಿ.ಎ.ಎಸ್. ಅಡಿಯಲ್ಲಿ ಅರ್ಹರಿರುವ ಸಹಾಯಕ ಮತ್ತು ಸಹ ಪ್ರಾಧ್ಯಾಪಕರುಗಳಿಗೆ ಮುಂಬಡ್ತಿ ನೀಡುವ ಪ್ರಕ್ರಿಯೆ ಪ್ರಾರಂಭಿಸಲು ಅನುಮೋದನೆ ನೀಡಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು."**

ಮೇಲಿನ ತೀರ್ಮಾನದ ಪ್ರಕಾರ 21.6.2023 ರಂದು ಸರ್ಕಾರಕ್ಕೆ ಮರು ಸಲ್ಲಿಸಿರುವ "ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ ಶಿಕ್ಷಕರು ಮತ್ತು ಇತರ ಶೈಕ್ಷಣಿಕ ಸಿಬ್ಬಂದಿಗಳಿಗೆ ಯು.ಜಿ.ಸಿ ನಿಯಮಾವಳಿಗಳ ಪ್ರಕಾರ ನೇರನೇಮಕಾತಿ ಮತ್ತು ಪದೋನ್ನತಿ ನೀಡುವ ಹಾಗೂ ಉನ್ನತ ಶಿಕ್ಷಣದಲ್ಲಿ ಮಾನದಂಡಗಳ ನಿರ್ವಹಣಾ ಕ್ರಮಗಳ ಪರಿನಿಯಮ" ಗಳಿಗೆ ಮಾನ್ಯ ಕುಲಾಧಿಪತಿಗಳು ಅನುಮೋದನೆ ನೀಡಿರುವ ಕುರಿತು ಇದುವರೆಗೆ ಸರಕಾರದಿಂದ ಯಾವುದೇ ಮಾಹಿತಿ ಬಂದಿರುವುದಿಲ್ಲ. ಈ ಹಿನ್ನೆಲೆಯಲ್ಲಿ, ಬೆಂಗಳೂರು ವಿಶ್ವವಿದ್ಯಾನಿಲಯದ ಸಿ.ಎ.ಎಸ್. ಪರಿನಿಮಯಗಳನ್ನು ನಮ್ಮ ವಿಶ್ವವಿದ್ಯಾನಿಯದಲ್ಲಿ ಅಳವಡಿಸಿಕೊಂಡು ಕಾರ್ಯ ತತ್ಪರವಾಗಲು ಸಿಂಡಿಕೇಟ್ ಸಭೆಯ ತೀರ್ಮಾನದಂತೆ, ಕ್ರಮಕೈಗೊಳ್ಳಬೇಕಾಗಿದೆ.

ಪ್ರಸ್ತುತ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ವಾಣಿಜ್ಯ, ಗಣಿತ, ಮ್ಯಾನೇಜಮೆಂಟ್, ವಿಭಾಗಗಳಲ್ಲಿ ಐದು ಸಹಪ್ರಾಧ್ಯಾಪಕರು ಸಿ.ಎ.ಎಸ್. ಯೋಜನೆ ಅಡಿಯಲ್ಲಿ, ಪ್ರಾಧ್ಯಾಪಕರ ಹುದ್ದೆಗೆ ಪದೋನ್ನತಿ ಪಡೆಯಲು ಮತ್ತು ಇಂಗ್ಲೀಷ ವಿಭಾಗದಲ್ಲಿ ಒಬ್ಬರು ಸಹಾಯಕ ಪ್ರಾಧ್ಯಾಪಕರು ಸಹಾಯಕ ಪ್ರಾಧ್ಯಾಪಕರ ಶ್ರೇಣಿಯ ಲೆವೆಲ್-12ಕ್ಕೆ ದಿನಾಂಕ 29.11.2021 ರಿಂದ ಬಡ್ತಿ ಹೊಂದಲು ಅರ್ಹತೆ ಹೊಂದಿರುತ್ತಾರೆ.

ವಿಶ್ವವಿದ್ಯಾನಿಲಯ ಅಳವಡಿಸಿಕೊಂಡಿರುವ ಸಿ.ಎ.ಎಸ್. ಪರಿನಿಯಮಗಳ ನಿಯಮ 4.1(III) ಪ್ರಕಾರ Screening/ Selection Committee ರಚನೆ ಕೆಳಗಿನಂತೆ ಇರುತ್ತದೆ.

1. ಕುಲಪತಿಗಳು [ಅಧ್ಯಕ್ಷರು]
2. ಕುಲಾಧಿಪತಿಗಳಿಂದ ನಾಮನಿರ್ದೇಶನಗೊಂಡ, ಪ್ರಾಧ್ಯಾಪಕರ ಶ್ರೇಣಿಗಿಂತ ಕಡಿಮೆಯಿಲ್ಲದ **ಒಬ್ಬರು ಶಿಕ್ಷಣ ತಜ್ಞರು** [ಸದಸ್ಯರು]
3. ಸಿಂಡಿಕೇಟ್ ಪ್ರಾಧಿಕಾರ ಅನುಮೋದಿಸಿರುವ ಸಂಬಂಧಿಸಿದ ವಿಷಯ/ಕ್ಷೇತ್ರದ ಪರಿಣಿತರ ಪಟ್ಟಿಯಿಂದ ಕುಲಪತಿಗಳು ನಾಮನಿರ್ದೇಶನ ಮಾಡುವ **ಮೂವರು ಪರಿಣಿತರು** [ಸದಸ್ಯರು]
4. **ನಿಕಾಯದ ಡೀನರು** (ಎಲ್ಲಿ ಅನ್ವಯವಾಗುತ್ತದೆಯೋ ಅಲ್ಲಿ) [ಸದಸ್ಯರು]
5. ಸಂಭಂಧಿಸಿದ **ವಿಭಾಗದ ಮುಖ್ಯಸ್ಥರು** [ಸದಸ್ಯರು]
6. ಕುಲಪತಿಗಳಿಂದ ನಾಮನಿರ್ದೇಶಿತರಾದ **ಪರಿಶಿಷ್ಟ ಜಾತಿ/ಪಂಗಡ/ ಹಿಂದುಳಿದ ವರ್ಗ/ಮಹಿಳೆ/ವಿಕಲಾಂಗ ವರ್ಗದ ಶಿಕ್ಷಣ ತಜ್ಞರು.** [ಸದಸ್ಯರು]

(ಯಾವುದಾದರೂ ಅಭ್ಯರ್ಥಿ ಈ ವರ್ಗಗಳಿಗೆ ಸಂಬಂಧಿಸಿದವರಾಗಿದ್ದಲ್ಲಿ ಮತ್ತು ಆಯ್ಕೆ ಸಮಿತಿಯಲ್ಲಿ ಯಾವೊಬ್ಬ ಸದಸ್ಯರು ಈ ವರ್ಗಗಳಿಗೆ ಸಂಬಂಧಿಸಿದವರಾಗಿರದಿದ್ದಲ್ಲಿ)

ಕುಲಸಚಿವರು ಆಯ್ಕೆ ಸಮಿತಿಯ ಕಾರ್ಯದರ್ಶಿಗಳಾಗಿರುತ್ತಾರೆ.

ಪರಿನಿಯಮದ 4.2.(III) ಕ್ರಮ ಸಂ (3) ರ ಪ್ರಕಾರ ವಿಷಯವಾರು ಸ್ಕ್ರೂಟಿನಿ ಮತ್ತು ಆಯ್ಕೆ ಸಮಿತಿಗಳ ರಚನೆಗೆ, ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳ ಪ್ರಾಧ್ಯಾಪಕರುಗಳ ಹೆಸರುಗಳನ್ನು ಕ್ರೋಢಿಕರಿಸಿ ಸಿದ್ಧಪಡಿಸಿದ ವಿಷಯವಾರು ಪಟ್ಟಿಗಳನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

**ಸಿಂಡಿಕೇಟ್ ತೀರ್ಮಾನ:**

**ಬೋಧಕ ಸಿಬ್ಬಂದಿಗಳ ಆಯ್ಕೆ ಸಮಿತಿಗಳಿಗೆ ವಿಷಯ ತಜ್ಞರನ್ನು ಕುಲಪತಿಗಳು ನಾಮನಿರ್ದೇಶನ ಮಾಡಲು ಕೆಳಕಂಡ ವಿಷಯಗಳ ಪ್ರಾಧ್ಯಾಪಕರ ಪಟ್ಟಿಗಳಿಗೆ ಅನುಮೋದನೆ ನೀಡಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು.**

| Arts Faculty | Science Faculty | Commerce Faculty |
|---|---|---|
| 1. English<br>2. Kannada<br>3. Economics<br>4. History<br>5. Mass Communication & Journalism<br>6. Political Science<br>7. Sociology<br>8. Social Work | 1. BioChemistry<br>2. Botany<br>3. Chemistry<br>4. Computer Science<br>5. Environmental Science<br>6. Mathematics<br>7. Physics<br>8. Zoology | 1. Commerce<br>2. Management |

**ಪ್ರಾಧ್ಯಾಪಕರು ಲಭ್ಯವಿಲ್ಲದಿರುವ ಉಳಿದ ವಿಷಯಗಳ ಮತ್ತು ಮಂಡಿಸಲಾದ ಪಟ್ಟಿಗಳಲ್ಲಿ ಅಗತ್ಯಗಳಿಗೆ ಅನುಗುಣವಾಗಿ ಕೇಂದ್ರಿಯ ವಿಶ್ವವಿದ್ಯಾಲಯಗಳಿಂದ / ಸಂಸ್ಥೆಗಳಿಂದ ಹಾಗೂ ಇತರ ರಾಜ್ಯಗಳ ವಿಶ್ವವಿದ್ಯಾಲಯಗಳಿಂದ ಹೆಸರುಗಳನ್ನು ಪಡೆದು ಸೇರಿಸಲು ಸಭೆ ಅನುಮತಿ ನೀಡಿತು.**

ವಿಷಯ ಸಂಖ್ಯೆ: 7

ವಿಷಯ: Ph.D. ಪ್ರವೇಶಾತಿಯಲ್ಲಿ ಅನುಸರಿಸಬೇಕಾದ ಮೀಸಲಾತಿ ಕ್ರಮವನ್ನು ಅಳವಡಿಸಿಕೊಳ್ಳಬೇಕಾದ ನಿಯಮಗಳು ಮತ್ತು ಮಾರ್ಗಸೂಚಿಗಳನ್ನು ವಿಶ್ವವಿದ್ಯಾಲಯದಲ್ಲಿ ಅನುಸರಿಸುವ ಬಗ್ಗೆ ಸಮಿತಿ ನೀಡಿರುವ ವರದಿಯನ್ನು ಅನುಮೋದಿಸುವ ಬಗ್ಗೆ

ಉಲ್ಲೇಖ: ಡೀನ್ಸ್ ಸಮಿತಿ ವರದಿ ದಿನಾಂಕ 02.09.2023

***ಪರಾಮರ್ಶಕ ಟಿಪ್ಪಣಿ:***

ಬೆಂಗಳೂರು ನಗರ ವಿಶ್ವವಿದ್ಯಾಲಯ ಅರ್ಹ ವಿದ್ಯಾರ್ಥಿಗಳಿಂದ Ph.D. ಪ್ರವೇಶಾತಿಗಾಗಿ ಅರ್ಜಿಯನ್ನು ಆಹ್ವಾನಿಸಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದ್ದು, ಕಡಿಮೆ ಸಂಖ್ಯೆಯ ಸಂಶೋಧನಾ ಮಾರ್ಗದರ್ಶಕರು ಇರುವ ವಿಭಾಗಗಳು/ ಕಾಲೇಜುಗಳು/ ಸಂಶೋಧನಾ ಕೇಂದ್ರಗಳಲ್ಲಿ ಮೀಸಲಾತಿ ಪ್ರಮಾಣ ನಿಗದಿ ಪಡಿಸುವ ಸಂಬಂಧ ಡೀನರುಗಳು ಮತ್ತು ಅಧಿಕಾರಿಗಳ ಸಭೆಯನ್ನು ದಿನಾಂಕ 02.09.2023ರಂದು ಕರೆಯಲಾಗಿತ್ತು. ಆ ಸಭೆಯ ನಡಾವಳಿಗಳನ್ನು ಮತ್ತು Ph.D. ಪ್ರವೇಶಾತಿಯಲ್ಲಿ ಅನುಸರಿಸಬೇಕಾದ ಕ್ರಮಗಳ ಬಗ್ಗೆ ಮಾರ್ಗ ಸೂಚಿಯನ್ನು ಸಿದ್ಧಪಡಿಸಲಾಗಿದೆ. ಸದರಿ ಮಾರ್ಗಸೂಚಿಯನ್ನು ಮತ್ತು ಡೀನರುಗಳ ಸಭೆಯ ನಡಾವಳಿಯನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಮತ್ತು ಅನುಮೋದನೆಗಾಗಿ ಮಂಡಿಸಲಾಗಿದೆ.

ಸಿಂಡಿಕೇಟ್ ತೀರ್ಮಾನ:

**ಪಿ.ಹೆಚ್.ಡಿ ಪ್ರವೇಶಾತಿಗಳಿಗೆ ಸಂಬಂಧಿಸಿದಂತೆ ಅನುಸರಿಸಬೇಕಾದ ಮೀಸಲಾತಿ ಕ್ರಮ ನಿಯಮ ಹಾಗೂ ಮಾರ್ಗಸೂಚಿ ಕುರಿತಂತೆ ಕುಲಸಚಿವರ ಅಧ್ಯಕ್ಷತೆಯಲ್ಲಿ ರಚಿಸಿದ ಡೀನರ ಮತ್ತು ಅಧಿಕಾರಿಗಳ ಸಭೆಯ ನಡವಳಿಗಳಿಗೆ ಮತ್ತು ಮಾರ್ಗಸೂಚಿಗಳಿಗೆ ಸಿಂಡಿಕೇಟ್ ಸಭೆ ಅನುಮೋದನೆ ನೀಡಿತು.**

ವಿಷಯ ಸಂಖ್ಯೆ: 8

ವಿಷಯ: ಬೆಂಗಳೂರು ನಗರ ವಿಶ್ವವಿದ್ಯಾಲಯದ ಕ್ಯಾಂಪಸ್ ಪುನರಾಭಿವೃದ್ಧಿ ಕಾಮಗಾರಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ಘಟಕವು ಹಣ ಬಿಡುಗಡೆಗೊಳಿಸಲು ಕೋರಿರುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ ಇಡಿ 103 ಹೆಚ್‌ಪಿಯು 2020 ದಿನಾಂಕ: 05-10-2020
2. ಸರ್ಕಾರದ ಆದೇಶ ಸಂಖ್ಯೆ ಇಡಿ 103 ಹೆಚ್‌ಪಿಯು 2020 ದಿನಾಂಕ: 19-12-2020
3. ದಿನಾಂಕ: 25-02-2021ರಂದು ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಗಳು
4. ದಿನಾಂಕ: 30-09-2021ರಂದು ಜರುಗಿದ ಸಿಂಡಿಕೇಟ್ ಸಭೆಯ ನಡಾವಳಿಗಳು
5. ಬೆಂಗಳೂರು ನಗರ ವಿಶ್ವವಿದ್ಯಾಲಯ ಮತ್ತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ನಡುವ ಕಾರ್ಯಗತಗೊಳಿಸಿರುವ ಒಡಂಬಡಿಕೆ ದಿನಾಂಕ: 10-08-2021

6. ಬಳಕೆ ಪ್ರಮಾಣ ಪತ್ರದ ದಿನಾಂಕ: 13-06-2022
7. ದಿನಾಂಕ: 18-06-2022ರಂದು ಜರುಗಿದ 18ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳು
8. ದಿನಾಂಕ: 31-07-2023ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳು
9. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ ರವರಿಗೆ ಸಲ್ಲಿಸಿರುವ ಪತ್ರದ ದಿನಾಂಕ: 01-09-2023
10. ಪತ್ರ ಸಂಖ್ಯೆ: /ಇಂ.ವಿ/ಕಾ/ಇಂ/ಬೆಂ/ಲೆ.ಶಾ/2023-24/617 ಮತ್ತು ಬಳಕೆ ಪ್ರಮಾಣ ಪತ್ರದ ದಿನಾಂಕ:10-08-2023

***<u>ಪರಾಮರ್ಶಕ ಟಿಪ್ಪಣಿ:</u>***

ಉಲ್ಲೇಖ (1)ರ ಸರ್ಕಾರದ ಆದೇಶದ ಪ್ರಕಾರ ಬೆಂಗಳೂರು ನಗರ ವಿಶ್ವವಿದ್ಯಾಲಯದ ಕ್ಯಾಂಪಸ್ ಪುನರಾಭಿವೃದ್ಧಿ (Campus Redevelopment) ಯೋಜನೆಯನ್ನು ಸಿದ್ದಪಡಿಸಲು ರಾಜ್ಯ ಸರ್ಕಾರದ ಸಂಸ್ಥೆಯಾದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಸಂಸ್ಥೆಗೆ ವಹಿಸಿ ಆದೇಶಿಸಿದೆ.

ಉಲ್ಲೇಖ (2)ರ ಸರ್ಕಾರದ ಆದೇಶದ ಪ್ರಕಾರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ಘಟಕ ಸಿದ್ದಪಡಿಸಿರುವ ಬೆಂಗಳೂರು ನಗರ ವಿಶ್ವವಿದ್ಯಾಲಯದ ಕ್ಯಾಂಪಸ್ ಪುನರಾಭಿವೃದ್ಧಿ (Campus Redevelopment) ಯೋಜನೆಯ ರೂ. 155.00 ಕೋಟಿಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಿರುತ್ತದೆ.

ಒಡಂಬಡಿಕೆ ಪ್ರಕಾರವಾಗಿ ಸರ್ಕಾರದ ಸಂಸ್ಥೆಯಾದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ಘಟಕಕ್ಕೆ ಬೆಂಗಳೂರು ನಗರ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭೆಯ ನಿರ್ಧಾರದ ಪ್ರಕಾರ ಈ ಕೆಳಕಂಡಂತೆ ಹಣವನ್ನು ಬಿಡುಗಡೆ ಮಾಡಲಾಗಿದೆ. (ಉಲ್ಲೇಖ 5ರ ಒಡಂಬಡಿಕೆಯ ಪ್ರತಿಯನ್ನು ಲಗತ್ತಿಸಲಾಗಿದೆ).

| ಕ್ರಮ ಸಂಖ್ಯೆ | ಬಿಡುಗಡೆ ಮಾಡಲಾಗಿರುವ ಮೊತ್ತ | ದಿನಾಂಕ | ಸಿಂಡಿಕೇಟ್ ಸಭೆಯ ದಿನಾಂಕ | ಬಳಕೆ ಪ್ರಮಾಣ ಪತ್ರದ ದಿನಾಂಕ |
|---|---|---|---|---|
| 1 | ರೂ. 25,14,96,311/- | 01-09-2021 | 25-02-2021 (ಉಲ್ಲೇಖ 3ರ ಪ್ರತಿಯನ್ನು ಲಗತ್ತಿಸಲಾಗಿದೆ) | 13-06-2022 (ಉಲ್ಲೇಖ 6ರ ಪ್ರತಿಯನ್ನು ಲಗತ್ತಿಸಲಾಗಿದೆ) |
| 2 | ರೂ.36,85,03,689/- | 06-12-2021 | 30-09-2021 (ಉಲ್ಲೇಖ 4ರ ಪ್ರತಿಯನ್ನು ಲಗತ್ತಿಸಲಾಗಿದೆ) | 13-06-2022 (ಉಲ್ಲೇಖ 6ರ ಪ್ರತಿಯನ್ನು ಲಗತ್ತಿಸಲಾಗಿದೆ) |
| 3 | ರೂ.62,00,00,000/- | 03-08-2022 | 18-06-2022 (ಉಲ್ಲೇಖ 7ರ ಪ್ರತಿಯನ್ನು ಲಗತ್ತಿಸಲಾಗಿದೆ) | 10-08-2023 (ಉಲ್ಲೇಖ 10ರ ಪ್ರತಿಯನ್ನು ಲಗತ್ತಿಸಲಾಗಿದೆ) |
| ಒಟ್ಟು | ರೂ.124,00,00,000/- | | | |

ಇಲ್ಲಿಯವರೆಗೆ ಬಿಡುಗಡೆಯಾಗಿರುವ ಮೊತ್ತ ರೂ. 124,00,00,000/- (ಒಂದು ನೂರ ಇಪ್ಪತ್ತ ನಾಲ್ಕು ಕೋಟಿ ರೂಪಾಯಿಗಳು ಮಾತ್ರ).

ಸರ್ಕಾರದಿಂದ ಈವರೆಗೆ ಅನುಮೋದನೆಯಾಗಿರುವ ಯೋಜನೆಯ ಒಟ್ಟು ಮೊತ್ತ, ಅನುದಾನ ಬಿಡುಗಡೆ ಮಾಡಿರುವ ವಿವರಗಳು ಮತ್ತು ಬಿಡುಗಡೆ ಮಾಡಬೇಕಾದ ಉಳಿದ ಅನುಮೋದನೆಯಾಗಿರುವ ಅನುದಾನದ ವಿವರಗಳು ಈ ಕೆಳಕಂಡಂತಿದೆ:

| | |
|---|---|
| ಸರ್ಕಾರದಿಂದ ಈವರೆಗೆ ಅನುಮೋದನೆಯಾಗಿರುವ ಯೋಜನೆ ಒಟ್ಟು ಮೊತ್ತ | ರೂ. 155,00,00,000/- |
| ಈಗಾಗಲೇ ಬಿಡುಗಡೆ ಮಾಡಿರುವ ಅನುಮೋದನೆಯಾಗಿರುವ ಅನುದಾನದ ಮೊತ್ತ | ರೂ. 124,00,00,000/- |
| ಬಾಕಿ ಉಳಿದಿರುವ ಅನುಮೋದನೆಯಾಗಿರುವ ಅನುದಾನದ ಮೊತ್ತ | ರೂ. 31,00,00,000/- |

ಕಾರ್ಯಪಾಲಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ಘಟಕ, ಬೆಂಗಳೂರು ರವರು ದಿನಾಂಕ: 10-08-2023ರ ಪತ್ರ ಸಂಖ್ಯೆ: /ಇಂ.ವಿ/ಕಾ/ಇಂ/ಬೆಂ/ಲೆ.ಶಾ/2023-24/617 ರ ಪತ್ರದಲ್ಲಿ ಈ ಕೆಳಕಂಡಂತೆ ಕೋರಿದ್ದಾರೆ. (ಉಲ್ಲೇಖ 10ರ ಪತ್ರದ ಪ್ರತಿಯನ್ನು ಲಗತ್ತಿಸಲಾಗಿದೆ).

ಬೆಂಗಳೂರು ನಗರ ವಿಶ್ವವಿದ್ಯಾಲಯದ ಕ್ಯಾಂಪಸ್ ಪುನರಾಭಿವೃದ್ಧಿ ಕಾಮಗಾರಿಯು ಪ್ರಗತಿಯಲ್ಲಿದ್ದು, ಟೆಂಡರ್ ಕಾಲವಧಿಯೊಳಗೆ ಪೂರ್ಣಗೊಳಿಸಿ ಹಸ್ತಾಂತರಿಸಲು ಅನುದಾನದ ಅವಶ್ಯಕತೆ ಇರುತ್ತದೆ. ಈ ಕಛೇರಿಗೆ ಇದುವರೆವಿಗೂ ತಮ್ಮಿಂದ ರೂ. 124,00,00,000/- (ಒಂದು ನೂರ ಇಪ್ಪತ್ತ ನಾಲ್ಕು ಕೋಟಿ ರೂಪಾಯಿಗಳು ಮಾತ್ರ) ಬಿಡುಗಡೆಯಾಗಿರುತ್ತದೆ, ಸದರಿ ಅನುದಾನವನ್ನು ಬಳಸಿಕೊಳ್ಳಲಾಗಿದ್ದು, ಬಳಕೆ ಮಾಡಿರುವ ಮೊತ್ತಕ್ಕೆ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸಲಾಗಿರುತ್ತದೆ ಮತ್ತು ಬಾಕಿ ಅನುದಾನ ರೂ. 44,62,63,600/- ಗಳನ್ನು (ಶಾಸನಬದ್ಧ ಶೇವಣಿಗಳು, ಪರಿಷ್ಕೃತ ಹೆಚ್ಚುವರಿ ಜಿ.ಎಸ್.ಟಿ (6%) ಮತ್ತು ದರಗಳ ವ್ಯತ್ಯಾಸದ ಮೊತ್ತವನ್ನು ಒಳಗೊಂಡು) ಗಳನ್ನು ಬಿಡುಗಡೆಗೊಳಿಸಲು ಕೋರಿರುತ್ತಾರೆ.

ಕಾರ್ಯಪಾಲಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ಘಟಕ, ಬೆಂಗಳೂರು ರವರು ದಿನಾಂಕ: 10-08-2023ರ ಪತ್ರ ಸಂಖ್ಯೆ: /ಇಂ.ವಿ/ಕಾ/ಇಂ/ಬೆಂ/ಲೆ.ಶಾ/2023-24/617 ರ ಪತ್ರದಲ್ಲಿ ಬಾಕಿ ಅನುದಾನ ರೂ. 44,62,63,600/- ಗಳನ್ನು ಬಿಡುಗಡೆಗೊಳಿಸಲು ಕೋರಿರುತ್ತಾರೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ಘಟಕ, ಬೆಂಗಳೂರು ರವರು ಮೊದಲು ಎಲ್ಲಾ ಕಾಮಗಾರಿಗಳನ್ನು ಅಂದಾಜು ಪಟ್ಟಿಯಂತೆ ಪೂರ್ಣಗೊಳಿಸಬೇಕು. ಪೂರ್ಣಗೊಂಡ ನಂತರ ಹಣಬಿಡುಗಡೆಗೆ ಕೋರಬಹುದಾಗಿರುತ್ತದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಯಾವುದೇ ಪಾವತಿಗಳನ್ನು ಬಿಡುಗಡೆ ಮಾಡುವ ಮೊದಲು, ಕಾಮಗಾರಿಯು ಪೂರ್ಣಗೊಂಡ ನಂತರ, ಅಂದಾಜು ಪಟ್ಟಿಯಂತೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿರುವುದರ ಬಗ್ಗೆ, ಕಾಮಗಾರಿಗಳು ಅಂದಾಜು ಪಟ್ಟಿಯಂತೆ ಅನುಷ್ಠಾನಗೊಳಿಸಿರುವುದು ತೃಪ್ತಿಕರವಾಗಿದ್ದು, ಗುಣಮಟ್ಟದಿಂದ ಕೂಡಿರುತ್ತದೆ ಎಂಬ ಬಗ್ಗೆ ಮೂರನೇ ವ್ಯಕ್ತಿ ತಪಾಸಣೆಯ ಪ್ರಮಾಣೀಕರಣದೊಂದಿಗೆ ಪೂರ್ಣಗೊಂಡ ಕಾಮಗಾರಿಯ ಛಾಯಾಚಿತ್ರಗಳು, ಅಳತೆ ಪುಸ್ತಕದೊಂದಿಗೆ (M.B. Book) ಬಿಲ್ಲನ್ನು ಸಲ್ಲಿಸಿದ ನಂತರ ಹಣ ಬಿಡುಗಡೆಗೆ ಕ್ರಮವಹಿಸಬಹುದಾಗಿರುತ್ತದೆ.

ಬೆಂಗಳೂರು ನಗರ ವಿಶ್ವವಿದ್ಯಾಲಯದ ಕ್ಯಾಂಪಸ್ ಪುನರಾಭಿವೃದ್ಧಿ ಕಾಮಗಾರಿಗೆ ಅನುಮೋದನೆಯಾಗಿರುವ ರೂ. 155.00 ಕೋಟಿಗಳ ವೆಚ್ಚದೊಳಗೆ ವಿಶ್ವವಿದ್ಯಾಲಯದ ಆವರಣವನ್ನು ಸುಭದ್ರಗೊಳಿಸಲು ಕಾಂಪೌಂಡ್ ಗೋಡೆಯನ್ನು ನಿರ್ಮಿಸುವುದು ಮತ್ತು ದುರಸ್ತಿ ಮಾಡಲಾದ ಆಡಳಿತಾತ್ಮಕ ಕಟ್ಟಡಕ್ಕೆ ಪೀಠೋಪಕರಣವನ್ನು ಒದಗಿಸುವ ಕಾಮಗಾರಿಗಳನ್ನು ಕಾರ್ಯಗತಗೊಳಿಸುವಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ಘಟಕ, ಬೆಂಗಳೂರು ರವರಿಗೆ ತಿಳಿಸಬೇಕಾಗಿರುತ್ತದೆ.

ಆದುದರಿಂದ ಸದರಿ ವಿಷಯನ್ನು ಚರ್ಚಿಸಲು ಮತ್ತು ತೀರ್ಮಾನಕ್ಕಾಗಿ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲಾಗಿದೆ.

***ವಿವರಣೆ:***

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯವರು 20% ಬಾಕಿ ಮೊತ್ತ 31.00 ಕೋಟಿ ರೂಪಾಯಿಗಳ ಜೊತೆಗೆ – ಶಾಸನಬದ್ಧ ಠೇವಣಿಗಳು, ಪರಿಷ್ಕೃತ ಹೆಚ್ಚುವರಿ ಜಿ.ಎಸ್.ಟಿ ಮತ್ತು ದರಗಳ ವ್ಯತ್ಯಾಸದ ಮೊತ್ತವನ್ನೂ ಒಳಗೊಂಡಂತೆ ಒಟ್ಟು 44,62,63,600/– ಗಳ ಬಿಡುಗಡೆಗೆ ಬೇಡಿಕೆ ಇಟ್ಟಿರುವುದನ್ನು ಸಭೆಯ ಗಮನಕ್ಕೆ ತರಲಾಯಿತು. ಮೂಲ ಅಂದಾಜಿಗಿಂತ ಹೆಚ್ಚುವರಿಯಾಗಿ ಶಾಸನಬದ್ಧ ಠೇವಣಿ, ಪರಿಷ್ಕೃತ ಜಿ.ಎಸ್.ಟಿ ಮತ್ತು ದರಗಳ ವ್ಯತಾಸ ಮೊತ್ತ ರೂ. 13,62,63,600/–ಗಳ ಪ್ರಸ್ತಾವನೆಯನ್ನು ಆಡಳಿತಾತ್ಮಕ ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಸರ್ಕಾರದಿಂದ ಆದೇಶವಾದ ಮೇಲೆ ಈ ಮೊತ್ತ ಬಿಡುಗಡೆಗೊಳಿಸಲು ಮತ್ತು ಬಾಕಿ 20% ಮೊತ್ತವನ್ನು ಕುರಿತು ಎಲ್ಲಾ ಕಾಮಗಾರಿಗಳು ಪೂರ್ಣಗೊಳಿಸಿದ ನಂತರ ಮೂರನೇ ವ್ಯಕ್ತಿ/ ಸಂಸ್ಥೆಯ ತಪಾಸಣೆ ಮಾಡಿ ಪ್ರಮಾಣೀಕರಿಸಿದ ನಂತರ ಪಾವತಿಸಲು ಪರಿಶೀಲಿಸಬಹುದೆಂದು ಕುಲಸಚಿವರು ಅಭಿಪ್ರಾಯ ವ್ಯಕ್ತಪಡಿಸಿದರು.

ಸದಸ್ಯರಾದ ಶ್ರೀ.ರಂಗಪ್ಪ ರವರು ಮಾತನಾಡಿ ಈ ಒಡಂಬಡಿಕೆ ಎರಡು ಸರ್ಕಾರಿ ಸಂಸ್ಥೆಗಳ ಮಧ್ಯೆ ಆಗಿರುವ ಒಡಂಬಡಿಕೆಯಾಗಿದ್ದು, ಸಾಮಾನ್ಯವಾಗಿ ಸರ್ಕಾರಿ ಸಂಸ್ಥೆಗಳು ಕೆಲಸ ವಹಿಸಿಕೊಳ್ಳುವ ಪೂರ್ವದಲ್ಲಿ ಪೂರ್ತಿ ಹಣ ಠೇವಣಿಯಾಗಿ ಇರಿಸಬೇಕಾಗುತ್ತದೆ. ನಾವು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚಿಸಿದ ನಂತರ 3 ಕಂತಿನಲ್ಲಿ ಹಣ ಬಿಡುಗಡೆ ಮಾಡಲು ಒಪ್ಪಂದವಾಗಿರುತ್ತದೆ. ಒಂದು ಸರ್ಕಾರದ ಸಂಸ್ಥೆಯಿಂದ ಇನ್ನೊಂದು ಸರ್ಕಾರಿ ಸಂಸ್ಥೆಗೆ ಹಣ ಬಿಡುಗಡೆಯಾಗುವುದರಿಂದ ಬಾಕಿ ಇರುವ 20% ಮೊತ್ತ ಬಿಡುಗಡೆ ಮಾಡಬಹುದೆಂದು ಅಭಿಪ್ರಾಯಪಟ್ಟರು. ಸದಸ್ಯರಾದ ಶ್ರೀ. ಸಮರ್ಥ ಮುನಿರಾಜುರವರು ಯೋಜನಾ ಮೇಲ್ವಿಚಾರಣಾ ಸಮಿತಿಯ ವರದಿಯನ್ನು ಚಿತ್ರಗಳ ಸಮೇತ ಸಭೆಗೆ ಒದಗಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಕುಲಪತಿಗಳು, ಯೋಜನಾ ಮೇಲ್ವಿಚಾರಣಾ ಸಮಿತಿ ಪುನರ್ ರಚಿಸಬೇಕಾಗಿದ್ದು, ಅದರಂತೆ ಕ್ರಮವಹಿಸಲಾಗುವದು ಎಂದು ತಿಳಿಸಿ, ಮೂಲ ಅಂದಾಜು ಪತ್ರದ ಪ್ರಕಾರ ಈಗಾಗಲೇ 80% ಮೊತ್ತವಾದ ರೂ. 124 ಕೋಟಿಗಳು ಬಿಡುಗಡೆ ಮಾಡಿದ್ದು ಬಾಕಿ ಇರುವ 20% ಮೊತ್ತವಾದ ರೂ. 31.00 ಕೋಟಿಗಳು ಬಿಡುಗಡೆಗೆ ಬಾಕಿ ಇದೆ. ಸದರಿ ಸಂಸ್ಥೆಯೊಂದಿಗೆ ಮಾಡಿಕೊಂಡಿರುವ ತಿಳುವಳಿಕೆ ಪತ್ರದ ಕ್ರಮ ಸಂಖ್ಯೆ 2(I) C(iii) ಪ್ರಕಾರ ಬಾಕಿ ಉಳಿದಿರುವ 20% ಮೊತ್ತವನ್ನು 2ನೇ ಕಂತಿನ ಬಳಿಕೆ ಪ್ರಮಾಣ ಪತ್ರ ನೀಡಿದ ನಂತರ ಬಿಡುಗಡೆ ಮಾಡಬೇಕೆಂಬ ಒಡಂಬಡಿಕೆ ಇದೆ. ಈ ಒಡಂಬಡಿಕೆ ಎರಡು ಸರ್ಕಾರಿ ಸಂಸ್ಥೆಗಳ ಮಧ್ಯ ಆಗಿದ್ದು, ಬಾಕಿ ಹಣ ಬಿಡುಗಡೆ ಮಾಡದೇ ಇದ್ದರೆ ಈ ವಿಳಂಬಕ್ಕೆ ವಿಶ್ವವಿದ್ಯಾನಿಲಯ ಕಾರಣವಾಗುತ್ತದೆ. ಈ ಕಾಮಗಾರಿಗಳ ನಿರ್ವಹಣೆ, ಗುಣಮಟ್ಟ ಕಾಪಾಡುವುದು, ತಾಂತ್ರಿಕ ವಿಷಯಗಳು, ಬಿಡುಗಡೆ ಮಾಡಿದ ಮೊತ್ತದ ಲೆಕ್ಕ ನಿರ್ವಹಣೆ, ಲೆಕ್ಕ ಪರಿಶೋಧನೆಗಳಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಇಂಜಿನಿಯರಿಂಗ್ ಘಟಕ ಉತ್ತರದಾಯಿತ್ವ ಹೊಂದಿರುತ್ತದೆ. ಕ್ಯಾಂಪಸ್ ಪುನರಾಭಿವೃದ್ಧಿ ಕಾಮಗಾರಿಗೆ ಅನುಮೋದನೆಯಾಗಿರುವ ರೂ. 155.00 ಕೋಟಿಗಳ ವೆಚ್ಚದೊಳಗೆ ವಿಶ್ವವಿದ್ಯಾಲಯದ ಆವರಣವನ್ನು ಸುಭದ್ರಗೊಳಿಸಲು ಕಾಂಪೌಂಡ್ ಗೋಡೆಯನ್ನು ನಿರ್ಮಿಸುವುದು ಮತ್ತು ನವೀಕರಿಸಲಾದ ಆಡಳಿತ ಕಟ್ಟಡಕ್ಕೆ ಪೀಠೋಪಕರಣವನ್ನು ಒದಗಿಸುವ ಕಾಮಗಾರಿಗಳನ್ನು ಸಹ ಅಂದಾಜು ಪತ್ರದಲ್ಲಿ ಸೇರಿಸಿ ಕಾರ್ಯಗತಗೊಳಿಸುವಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ಘಟಕ, ಬೆಂಗಳೂರು ರವರಿಗೆ ತಿಳಿಸಲಾಗುವದು. ವಿವಿಧ ಕೋರ್ಸುಗಳಿಗೆ ಪ್ರವೇಶಾತಿಗಳು ನಡೆದಿದ್ದು ಪಾಠ, ಪ್ರವಚನಗಳಿಗೆ ಕಟ್ಟಡಗಳ ಅಗತ್ಯವಿದೆ ಎಂದು ಮಾನ್ಯ ಕುಲಪತಿಗಳು ವಿವರಿಸಿದರು.

ಸಿಂಡಿಕೇಟ್ ತೀರ್ಮಾನ:

1. ಒಪ್ಪಂದದ ಪ್ರಕಾರ ಎರಡನೇ ಕಂತಿನ ಮೊತ್ತಕ್ಕೆ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸಿರುವ ಹಿನ್ನೆಲೆಯಲ್ಲಿ ಬಾಕಿ ಇರುವ 20% ಮೊತ್ತವಾದ ರೂ. 31,00,00,000/- (ಮುವತ್ತೊಂದು ಕೋಟಿ ರೂಪಾಯಿ) ಗಳನ್ನು ಆರೋಗ್ಯ ಮತ್ತು ಕುಟಂಬ ಕಲ್ಯಾಣ ಇಲಾಖೆಯ ಇಂಜಿನಿಯರಿಂಗ್ ಘಟಕಕ್ಕೆ ಬಿಡುಗಡೆ ಮಾಡಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು.
2. ಶಾಸನಬದ್ಧ ಕೇವಣಿ ಜಿ.ಎಸ್.ಟಿ ಮತ್ತು ವ್ಯತ್ಯಾಸದ ಮೊತ್ತ ರೂ. 13,62,63,600 (ಹದಿಮೂರು ಕೋಟಿ ಅರವತ್ತೆರಡು ಲಕ್ಷ ಅರವತ್ತಮೂರು ಸಾವಿರ ಆರು ನೂರು ರೂಪಾಯಿ) ಗಳನ್ನು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಸರ್ಕಾರದ ಆದೇಶದನ್ವಯ ಕ್ರಮವಹಿಸಬಹುದೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು.
3. ಕ್ಯಾಂಪಸ್ ಪುನರಾಭಿವೃದ್ಧಿ ಕಾಮಗಾರಿಗೆ ಅನುಮೋದನೆಯಾಗಿರುವ ರೂ. 155.00 ಕೋಟಿಗಳ ವೆಚ್ಚದೊಳಗೆ ವಿಶ್ವವಿದ್ಯಾಲಯದ ಆವರಣವನ್ನು ಸುಭದ್ರಗೊಳಿಸಲು ಕಾಂಪೌಂಡ್ ಗೋಡೆಯನ್ನು ನಿರ್ಮಿಸುವುದು ಮತ್ತು ದುರಸ್ತಿ ಮಾಡಲಾದ ಆಡಳಿತ ಕಟ್ಟಡಕ್ಕೆ ಪೀಠೋಪಕರಣವನ್ನು ಒದಗಿಸುವ ಕಾಮಗಾರಿಗಳನ್ನು ಅಂದಾಜು ಪತ್ರದಲ್ಲಿ ಸೇರಿಸಿ ಕಾರ್ಯಗತಗೊಳಿಸುವಂತೆ ಆರೋಗ್ಯ ಮತ್ತು ಕುಟಂಬ ಕಲ್ಯಾಣ ಇಲಾಖೆಯ, ಇಂಜಿನಿಯರಿಂಗ್ ಘಟಕಕ್ಕೆ ಸೂಚಿಸಲು ಸಿಂಡಿಕೇಟ್ ಸಭೆ ಅನುಮೋದನೆ ನೀಡಿತು.

ವಿಷಯ ಸಂಖ್ಯೆ: 9

ವಿಷಯ:- ಡಾ. ವಿ. ಲೋಕೇಶ, ಪ್ರಾಧ್ಯಾಪಕರು, ಗಣಿತಶಾಸ್ತ್ರ ವಿಭಾಗ, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ ಅವರನ್ನು ಬೆಂಗಳೂರು ನಗರ ವಿಶ್ವವಿದ್ಯಾನಿಲಯಕ್ಕೆ ವರ್ಗಾವಣೆ ಮಾಡಲು ಸಹಮತಿ ನೀಡುವ – ಬಗ್ಗೆ.

ಉಲ್ಲೇಖ:-
1. ಡಾ. ವಿ. ಲೋಕೇಶ, ಪ್ರಾಧ್ಯಾಪಕರ ಮನವಿ ಪತ್ರ ದಿನಾಂಕ: 19.09.2023.
2. ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ನಿರಾಕ್ಷೇಪಣಾ ಪ್ರಮಾಣ ಪತ್ರ ದಿನಾಂಕ: ವಿಶ್ರೀಕೃವಿಬ/ಡಿಪಿಎಆರ್/ಬೋಧಕ/ನಿಪ್ರ/2023-24/1033, ದಿನಾಂಕ: 18.08.2023.
3. ಸರ್ಕಾರದ ಆದೇಶ ಸಂಖ್ಯೆ: ಇಡಿ 493 ಯುಬಿವಿ 2017 (ಭಾಗ-4), ದಿನಾಂಕ: 07.11.2019.

*ಪರಾಮರ್ಶಕ ಟಿಪ್ಪಣಿ:*

ಡಾ. ವಿ. ಲೋಕೇಶ, ಪ್ರಾಧ್ಯಾಪಕರುಗಣಿತಶಾಸ್ತ್ರ ವಿಭಾಗ, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ ಅವರು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪ್ರಕರಣ 58 ರಡಿಯಲ್ಲಿ ಅಂತರ ವಿಶ್ವವಿದ್ಯಾಲಯಗಳಿಗೆ ವರ್ಗಾವಣೆಗೆ ಅವಕಾಶವಿರುವಂತೆ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಗಣಿತಶಾಸ್ತ್ರ ವಿಭಾಗದ ಸಹ ಪ್ರಾಧ್ಯಾಪಕರ ಹುದ್ದೆಯ ಎದುರಾಗಿ ವರ್ಗಾವಣೆಗೊಳ್ಳಲು ವಿಶ್ವವಿದ್ಯಾನಿಲಯದಿಂದ ನಿರಾಕ್ಷೇಪಣಾ ಪತ್ರ ನೀಡುವಂತೆ ಕೋರಿ ದಿನಾಂಕ: 19.09.2023 ರಂದು ಮನವಿ

ಸಲ್ಲಿಸಿರುತ್ತಾರೆ. ಮನವಿಯ ಜೊತೆ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದವರು ನೀಡಿರುವ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತಾರೆ.

ಸರ್ಕಾರಿ ಆದೇಶ ಸಂಖ್ಯೆ: ಇಡಿ 493 ಯುಬಿವಿ 2017 (ಭಾಗ–4), ದಿನಾಂಕ: 07.11.2019 ರ ಪ್ರಕಾರ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಗಣಿತಶಾಸ್ತ್ರ ಸ್ನಾತಕೋತ್ತರ ಅಧ್ಯಯನ ವಿಭಾಗಕ್ಕೆ 01–ಪ್ರಾಧ್ಯಾಪಕರು, 02–ಸಹಪ್ರಾಧ್ಯಾಪಕರು ಮತ್ತು 04–ಸಹಾಯಕ ಪ್ರಾಧ್ಯಾಪಕ ಒಟ್ಟು 07 ಬೋಧಕ ಹುದ್ದೆಗಳು ಮಂಜೂರಾಗಿರುತ್ತವೆ. ಮಂಜೂರಾಗಿರುವ 07 ಬೋಧಕ ಹುದ್ದೆಗಳ ಪೈಕಿ 2 ಸಹಾಯಕ ಪ್ರಾಧ್ಯಾಪಕ ಹುದ್ದೆಗಳ ಮಾತ್ರ ಭರ್ತಿಯಾಗಿದ್ದು, ಉಳಿದಂತೆ 01 ಪ್ರಾಧ್ಯಾಪಕ, 02 ಸಹಪ್ರಾಧ್ಯಾಪಕ ಮತ್ತು 02 ಸಹಾಯಕ ಪ್ರಾಧ್ಯಾಪಕ ಹುದ್ದೆಗಳು ಖಾಲಿ ಇರುತ್ತದೆ. ಸರ್ಕಾರಿಆದೇಶ ದಿನಾಂಕ: 07.11.2019 ರ ಪ್ರಕಾರ ಗಣಿತಶಾಸ್ತ್ರ ವಿಭಾಗಕ್ಕೆ ಮಂಜೂರಾಗಿರುವ ಹುದ್ದೆಗಳ ಪೈಕಿ 02 ಸಹಾಯಕ ಪ್ರಾಧ್ಯಾಪಕ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರದಿಂದ ಅನುಮತಿ ನೀಡಲಾಗಿದೆ. ಮಂಜೂರಾಗಿರುವ ಸಹಪ್ರಾಧ್ಯಾಪಕ ಹುದ್ದೆಗಳನ್ನು ಭರ್ತಿ ಮಾಡಲು ಇನ್ನೂ ಅನುಮತಿ ದೊರತಿರುವುದಿಲ್ಲ.

ಡಾ. ವಿ. ಲೋಕೇಶ, ಪ್ರಾಧ್ಯಾಪಕರುರವರು ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದಲ್ಲಿ ಸಹಪ್ರಾಧ್ಯಾಪಕರಾಗಿ ನೇಮಕಾತಿ ಹೊಂದಿ ಸಿ.ಎ.ಎಸ್ ಅಡಿಯಲ್ಲಿ ಪ್ರಾಧ್ಯಾಪಕರ ಹುದ್ದೆಗೆ ಮುಂಬಡ್ತಿ ಹೊಂದಿರುತ್ತಾರೆ. ಅದುದರಿಂದ ಇವರ ವರ್ಗಾವಣೆಯನ್ನು ಬೆಂಗಳೂರು ನಗರ ವಿಶ್ವವಿದ್ಯಾನಿಲಯಕ್ಕೆ ಮಂಜೂರಾಗಿ ಖಾಲಿ ಇರುವ 2 ಸಹಪ್ರಾಧ್ಯಾಪಕ ಹುದ್ದೆಗಳ ಪೈಕಿ ಒಂದು ಹುದ್ದೆಯಎದುರಾಗಿ ಪರಿಗಣಿಸಬೇಕಾಗಿರುತ್ತದೆ.

ಕರ್ನಾಟಕರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪ್ರಕರಣ 58 ರಡಿಯಲ್ಲಿಅಂತರ ವಿಶ್ವವಿದ್ಯಾಲಯಗಳ ವರ್ಗಾವಣೆಗೆ ಅವಕಾಶವಿರುವಂತೆ ಡಾ. ವಿ. ಲೋಕೇಶ, ಪ್ರಾಧ್ಯಾಪಕರು, ಗಣಿತಶಾಸ್ತ್ರ ವಿಭಾಗ, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ಅವರು ಬೆಂಗಳೂರು ನಗರ ವಿಶ್ವವಿದ್ಯಾನಿಲಯಕ್ಕೆ ವರ್ಗಾವಣೆ ಕೋರಿ ಸಲ್ಲಿಸಿರುವ ವರ್ಗಾವಣೆಯ ಮನವಿಯನ್ನು ಸಿಂಡಿಕೇಟ್ ಸಭೆಯ ಪರಿಶೀಲನೆಗಾಗಿ ಮಂಡಿಸಿದೆ.

**ಸಿಂಡಿಕೇಟ್ ತೀರ್ಮಾನ:**

**ವಿಶ್ವವಿದ್ಯಾನಿಲಯದ ಹಿತದೃಷ್ಟಿಯಿಂದ ಡಾ. ವಿ ಲೋಕೇಶ, ಪ್ರಾಧ್ಯಾಪಕರು, – ಹುದ್ದೆ ಸಮೇತವಾಗಿ ಬೆಂಗಳೂರು ನಗರ ವಿಶ್ವವಿದ್ಯಾನಿಲಯಕ್ಕೆ ವರ್ಗಾವಣೆ ಹೊಂದಲು ವಿಜಯನಗರ ಶ್ರೀ.ಕೃಷ್ಣದೇವರಾಯ ವಿಶ್ವವಿದ್ಯಾಲಯದ ನಿರಾಕ್ಷೇಪಣೆ ಪತ್ರ ನೀಡಿ ಮರು ಪ್ರಸ್ತಾವನೆ ಸಲ್ಲಿಸಿದಲ್ಲಿ ಸದರಿಯವರ ವರ್ಗಾವಣೆ ಕುರಿತಂತೆ ನಿಯಮಾನುಸಾರ ಪರಿಗಣಿಸಲಾಗುವುದೆಂದು ಸಿಂಡಿಕೇಟ್ ಸಭೆ ತೀರ್ಮಾನಿಸಿತು.**

**ವಿಷಯ ಸಂಖ್ಯೆ: 10**

ವಿಷಯ: ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ Examination Process Management ಮತ್ತು E-Governance in Examination Management ಸೇವೆಗಳನ್ನು ಹೊರಗುತ್ತಿಗೆ ಧಾರದಲ್ಲಿ ನಿರ್ವಹಿಸುತ್ತಿರುವ M/s Logisys ಮತ್ತು M/s Uniclare ಸಂಸ್ಥೆಗಳ ಸೇವೆಯನ್ನು ಮುಂದುವರೆಸುವ ಬಗ್ಗೆ ಸಮಿತಿಯು ಪರಿಶೀಲನೆ ಮಾಡಿ ಸಲ್ಲಿಸಿರುವ ವರದಿಯನ್ನು ಅನುಮೋದಿಸುವ ಬಗ್ಗೆ.

ಉಲ್ಲೇಖ: ಸಮಿತಿಯು ವರದಿ ಸಲ್ಲಿಸಿರುವ ದಿನಾಂಕ:22.09.2023

*ಪರಾಮರ್ಶಕ ಟಿಪ್ಪಣಿ:*

M/s Logisys ಮತ್ತು M/s Uniclare ಸಂಸ್ಥೆಗಳು ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಜೊತೆ ಪರೀಕ್ಷಾ ಕಾರ್ಯಗಳನ್ನು ನಡೆಸಲು ಒಪ್ಪಂದಗಳನ್ನು ಮಾಡಿಕೊಂಡಿದ್ದವು. ಆ ಒಪ್ಪಂದ ಮುಗಿಯುತ್ತಾ ಬಂದಿದ್ದು, ಅನುತ್ತೀರ್ಣಗೊಂಡ ವಿದ್ಯಾರ್ಥಿಗಳ ಪರೀಕ್ಷೆಗಳನ್ನು ನಡೆಸಲು ಸದರಿ ಎರಡು ಸಂಸ್ಥೆಗಳ ಸೇವೆಯನ್ನು ಮುಂದುವರೆಸುವ ಕುರಿತು ಚರ್ಚಿಸಲು ವಿಶ್ವವಿದ್ಯಾನಿಲಯವು ಸಮಿತಿಯೊಂದನ್ನು ರಚಿಸಿತ್ತು. ಈ ಸಮಿತಿಯ ಸಭೆಯನ್ನು ದಿನಾಂಕ 22.09.2023 ರಂದು ಮಧ್ಯಾಹ್ನ 4.00 ಗಂಟೆಗೆ ಕುಲಸಚಿವರು (ಮೌಲ್ಯಮಾಪನ) ರವರ ಕೊಠಡಿಯಲ್ಲಿ ಕರೆಯಲಾಗಿತ್ತು. ಸದರಿ ಸಭೆಯಲ್ಲಿ ನಡೆದ ಸಭಾ ನಡಾವಳಿಯನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಮತ್ತು ಅನುಮೋದನೆಗಾಗಿ ಮಂಡಿಸಲಾಗಿದೆ.

ಸಿಂಡಿಕೇಟ್ ತೀರ್ಮಾನ:

**Examination Process Management ಮತ್ತು E-Governance in Examination Management ಸೇವೆಗಳನ್ನು M/s Logisys ಮತ್ತು M/s Uniclare ಸಂಸ್ಥೆಯೊಂದಿಗೆ ಈಗಾಗಲೇ ಒಪ್ಪಿಕೊಂಡಿರುವ ದರಗಳು ಮತ್ತು ಒಡಂಬಡಿಕೆಗಳ ಆಧಾರದ ಮೇಲೆ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಒಂದು ವರ್ಷದ ಅವಧಿಗೆ ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ ಮುಂದುವರೆಸಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು.**

**ಸಾಮಾನ್ಯ ಚರ್ಚೆ:**

1. ಸದಸ್ಯರಾದ ಶ್ರೀ ಎಂ. ವಿ. ರಂಗಪ್ಪರವರು ವಿವಿಧ ವಿಭಾಗಗಳಿಗೆ ಅಗತ್ಯವಾದ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕ್ರಮವಹಿಸಬೇಕೆಂದು ಮತ್ತು ಕಾಪೌಂಡ್ ಗೋಡೆಯ ಎತ್ತರ ಹೆಚ್ಚಿಸಲು ಹಾಗೂ ಅದರ ಮೇಲೆ ತಂತಿಬೇಲಿ ನಿರ್ಮಿಸಬೇಕೆಂದು ಪ್ರಸ್ತಾಪಿಸಿದರು.
2. ಸದಸ್ಯರಾದ ಶ್ರೀ. ಕೆ.ಎಂ ಮಹೇಶ್ ರವರು Tower Clock ದುರಸ್ಥಿ ಮಾಡಿಸಲು ವಿನಂತಿಸಿದರು.

ಕುಲಸಚಿವರಿಂದ ವಂದನಾರ್ಪಣೆ ಮತ್ತು ರಾಷ್ಟ್ರಗೀತೆಯೊಂದಿಗೆ ಸಭೆ ಮುಕ್ತಾಯಗೊಳಿಸಲಾಯಿತು.

ಸಹಿ/-
ಕುಲಸಚಿವರು
ಸದಸ್ಯಕಾರ್ಯದರ್ಶಿಗಳು

ಸಹಿ/-
ಕುಲಪತಿಗಳು
ಸಭಾಧ್ಯಕ್ಷರು

ಕುಲಸಚಿವರು
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
ಬೆಂಗಳೂರು